ಸಂಪುಟ : 9 ಸಂಚಿಕೆ 148 ಪುಟ : 4 ಬೆಲೆ: 3.00 ಬುಧವಾರ ಜುಲೈ 17 2024 Mob : 9448326533- 9019256545 ಗದಗ

ಸಂಪಾದಕರು : ಎಚ್.ಎಮ್. ಶರೀಫನವರ್

# ವಿಜಯ ಸಾಕ್ಷಿ

ವಾಸ್ತವ, ವಸ್ತುನಿಷ್ಠ, ವಿಭಿನ್ನ... VIJAYA SAKSHI KANNADA DAILY ಕನ್ನಡ ದಿನಪತ್ರಿಕೆ




Volume : 9 Issue : 148 Pages : 4 Price : 3.00 Wednesday July 17 2024 Gadag RNINo:KARKAN/2015/63412 E-mail: vijayasakshidaily@gmail.com Post Regn.No:GDG/72/2023-25

## ಮೊಹರಂ: ಮದ್ಯ ಮಾರಾಟ, ಸಾಗಾಟ ನಿಷೇಧ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ ಜಿಲ್ಲೆಯಾದ್ಯಂತ ಹಿಂದೂ ಮುಸ್ಲಿಂ ಬಾಂಧವರು ಕೂಡಿಕೊಂಡು ಆಚರಿಸಲ್ಪಡುವ ಮೊಹರಂ ಹಬ್ಬದ ನಿಮಿತ್ತ ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಜುಲೈ 17 ರ ಬೆಳಗಿನ 6 ಗಂಟೆಯಿಂದ ಜುಲೈ 18 ರ ಬೆಳಗಿನ 6 ಗಂಟೆಯವರೆಗೆ ಜಿಲ್ಲಾದ್ಯಾಂತ ಮದ್ಯ ಮಾರಾಟ ಮತ್ತು ಮದ್ಯ ಸಾಗಾಟ ನಿಷೇಧಿಸಿದೆ.

ಈ ಸಂದರ್ಭದಲ್ಲಿ ಬಾರ್‌ಗಳು, ಕ್ಲಬ್‌ಗಳು, ಬಿಯರ್, ಭಾರತೀಯ ತಯಾರಿಕೆಯ ಮದ್ಯದ ಅಂಗಡಿಗಳನ್ನು ಮೇಲ್ಕಾಣಿಸಿದ ಅವಧಿಯಲ್ಲಿ ಮುಚ್ಚತಕ್ಕದ್ದು. ಪರಿಸ್ಥಿತಿಗೆ ಅನುಗುಣವಾಗಿ ಸಾರ್ವಜನಿಕ ಶಾಂತತೆಯನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ವಲಯ ಅಬಕಾರಿ ಇನ್ಸಪೆಕ್ಟರ್ ಹಾಗೂ ಅಬಕಾ ರಿ ಉಪ ಆಯುಕ್ತರು ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿ ಗೋವಿಂದರೆಡ್ಡಿ ಆದೇಶ ಹೊರಡಿಸಿದ್ದಾರೆ.

## ಜು.19ರಂದು ನಗರಸಭೆಯ ವಿಶೇಷ ಸಾಮಾನ್ಯ ಸಭೆ

**■ವಿಜಯಸಾಕ್ಷಿ ಸುದ್ದಿ, ಗದಗ**

ಗದಗ-ಬೆಟಗೇರಿ ನಗರಸಭೆಯಲ್ಲಿ ಜುಲೈ 19 ರಂದು ಬೆಳಿಗ್ಗೆ 11 ಗಂಟೆಗೆ ವಿಶೇಷ ಸಾಮಾನ್ಯ ಸಭೆಯು ಜರುಗಲಿದೆ ಎಂದು ಗದಗ- ಬೆಟಗೇರಿ ನಗರಸಭೆ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿದೇಶದಲ್ಲಿ ಉದ್ಯೋಗ ಅವಕಾಶ

**■ವಿಜಯಸಾಕ್ಷಿ ಸುದ್ದಿ, ಗದಗ**

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಬೆಂಗಳೂರು ಇವರು ಸ್ವದೇಶಿ ಅಭ್ಯರ್ಥಿಗಳಿಗೆ ವಿದೇಶದಲ್ಲಿ ಉದ್ಯೋಗವನ್ನು ಒದಗಿಸುವ ನಿಟ್ಟಿನಲ್ಲಿ ಜುಲೈ 20ರಂದು ಬೆಂಗಳೂರಿನಲ್ಲಿ ಸ್ಟೀಲ್ ಫಿಕ್ಸರ್, ಮ್ಯಾಸನ್, ಕಾರ್ಪೆಂಟರ್, ಅಲ್ಯುಮಿನಿಯಂ ಫ್ಯಾಬ್ರಿಕೇಟರ್, ಫರ್ನಿಚರ್ ಕಾರ್ಪೆಂಟರ್, ಫರ್ನಿಚರ್ ಪೇಂಟರ್, ಪ್ಲಂಬರ್, ಎಸಿ ಟೆಕ್ನಿಷಿಯನ್, ಹೆಲ್ಪರ್ ಹುದ್ದೆಗಳಿಗಾಗಿ ನೇರ ಸಂದರ್ಶನವನ್ನು ಏರ್ಪಡಿಸಿದ್ದಾರೆ.

ಎಸ್‌ಎಸ್‌ಎಲ್‌ಸಿ ಪಾಸಾದ ಇಂಗ್ಲೀಷ್ ಅಥವಾ ಹಿಂದಿ ಭಾಷೆಯ ಜ್ಞಾನವನ್ನು ಹೊಂದಿರುವ ಆಸಕ್ತಿಯುಳ್ಳ ಅಭ್ಯರ್ಥಿಗಳು ವಾಟ್ಸ್‌ಆಪ್ ನಂ-9606492213/9606492214ಗೆ ವಿದ್ಯಾರ್ಹತೆಯ ಬಯೋಡಾಟಾವನ್ನು ಕಳುಹಿಸಿ ಹಾಗೂ ದೂರವಾಣಿ ಮೂಲಕ ಸಂಪರ್ಕಿಸಿದ ನಂತರವೇ, ಇಂಟರ್ ನ್ಯಾಷನಲ್ ಮೈಗ್ರೇಷನ್ ಸೆಂಟರ್-ಕರ್ನಾಟಕ, 4ನೇ ಮಹಡಿ, ಕಲ್ಯಾಣ ಸುರಕ್ಷಾ ಭವನ, ಐ.ಟಿ.ಐ ಕಾಲೇಜ್ ಕ್ಯಾಂಪಸ್, ಡೈರಿ ಸರ್ಕಲ್, ಬನ್ನೇರುಘಟ್ಟ ಮುಖ್ಯ ರಸ್ತೆ, ಬೆಂಗಳೂರು-560029 ಇಲ್ಲಿ ನೇರ ಸಂದರ್ಶನಕ್ಕೆ ಹಾಜರಾಗುವಂತೆ ಗದಗ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಡಾ. ಮಲ್ಲೂರ ಬಸವರಾಜ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅರ್ಜಿ ಆಹ್ವಾನ

**■ವಿಜಯಸಾಕ್ಷಿ ಸುದ್ದಿ, ಗದಗ**

ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿತ ವಂತಿಗೆ ಪಾವತಿಸುವ ಸಂಘಟಿತ ಕಾರ್ಮಿಕರ ಮಕ್ಕಳಿಂದ (ಪ್ರೌಢಶಾಲೆಯಿಂದ ಸ್ನಾತಕೋತ್ತರ ಪದವಿಯವರಿಗೆ ಹಾಗೂ ವೈದ್ಯಕೀಯ/ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿರುವವರಿಗೆ) 2024-25ನೇ ಸಾಲಿಗೆ ಶೈಕ್ಷಣಿಕ ಪ್ರೋತ್ಸಾಹಧನ ಸಹಾಯಕ್ಕೆ ಆನ್‌ಲೈನ್ ಮುಖಾಂತರ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸಲು 31-1-2025 ಕೊನೆಯ ದಿನಾಂಕವಾಗಿರುತ್ತದೆ. ಕಾರ್ಮಿಕರ ಮಾಸಿಕ ವೇತನ 35 ಸಾವಿರ ರೂ ಮೀರಿರಬಾರದು. ಒಂದು ಕುಟುಂಬದಲ್ಲಿ ಒಬ್ಬ ವಿದ್ಯಾರ್ಥಿಗೆ ಮಾತ್ರ ಈ ಸೌಲಭ್ಯ ನೀಡಲಾಗುವುದು.

ಶೈಕ್ಷಣಿಕ ಪ್ರೋತ್ಸಾಹಧನ ಸಹಾಯ ಬಯಸುವ ವಿದ್ಯಾರ್ಥಿಗಳು ಆನ್‌ಲೈನ್ ಮುಖಾಂತರ ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯ ವೆಬ್ ಸೈಟ್ ತಿತಿತಿ.ಇಾಟತಿಭಚಿಡಿಫ.ಇಾಚಿಡಿಟಚಿಣಚಿಇಾಚಿ.ರಿಂತ. ಾಟಿ ಇಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಕಲ್ಯಾಣ ಮಂಡಳಿ, ಕಾರ್ಮಿಕ ಕಲ್ಯಾಣ ಭವನ ನಂ. 48, 1ನೇ ಮತ್ತು 2ನೇ ಮಹಡಿ, ಮತ್ತಿಕೆರೆ ಮುಖ್ಯರಸ್ತೆ, ಯಶವಂತಪುರ-ಬೆಂಗಳೂರು ಇಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ 080-23475188, 8277120505, 9141585402, 9141602562ಗೆ ಸಂಪರ್ಕಿಸಬಹುದಾಗಿದೆ.

### ಅವಧಿ ಪೂರ್ಣಗೊಂಡರೂ ಮುಗಿಯದ ಕಾಮಗಾರಿ | ಸಾರ್ವಜನಿಕರಿಂದ ಹಿಡಿಶಾಪ

# ಕಾಮಗಾರಿಗಳಿಗಿಲ್ಲ ಗ್ರಹಣ ಮೋಕ್ಷ

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ ವಿವಿಧ ವಾರ್ಡ್‌ಗಳಲ್ಲಿ ನಗರೋತ್ಥಾನ ಯೋಜನೆಯ 8.5 ಕೋಟಿ ರೂ ಅನುದಾನದಲ್ಲಿ ಕೈಗೊಂಡ ರಸ್ತೆ, ಚರಂಡಿ ನಿರ್ಮಾಣ ಸೇರಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ಅವಧಿ ಪೂರ್ಣಗೊಂಡರೂ ಕಾಮಗಾರಿ ಮಾತ್ರ ಪೂರ್ಣಗೊಳ್ಳುವ ಲಕ್ಷಣಗಳು ಕಾಣದೇ ಅಭಿವೃದ್ಧಿ ಮರೀಚಿಕೆಯಾಗಿದೆ. ರಸ್ತೆ, ಚರಂಡಿ ಮತ್ತು ಮೂಲಭೂತ ಸೌಲಭ್ಯಗಳಿಗಾಗಿ ಜನತೆ ಪುರಸಭೆಗೆ ಹಿಡಿಶಾಪ ಹಾಕುತ್ತಿದ್ದಾರೆ.

ನಗರೋತ್ಥಾನದ ಶೇ.24.10ರಡಿ 40.97 ಲಕ್ಷ ಪೌರ ಕಾರ್ಮಿಕರ ಕಲ್ಯಾಣಕ್ಕಾಗಿ, ಅಂಬೇಡ್ಕರ ನಗರದಲ್ಲಿ ಸ್ನಾನ ಮತ್ತು ವಿಶ್ರಾಂತಿ ಗೃಹ, ಎಸ್‌ಸಿಪಿ ಘಟಕದಡಿ 116.62 ಲಕ್ಷ ರೂ ಅನುದಾನದಲ್ಲಿ ವಾರ್ಡ್ ನಂ 1, 20, 22 ಮತ್ತು 23ರಲ್ಲಿ ರಸ್ತೆ ಅಭಿವೃದ್ಧಿ, ವಾರ್ಡ್ ನಂ 11, 12 ಮತ್ತು 13ರಲ್ಲಿ ಬಳಿಗಾರ ಓಣಿಯಿಂದ ಸೋಮೇಶ್ವರ ದೇವಸ್ಥಾನ ರಸ್ತೆ ಅಭಿವೃದ್ಧಿ, ಸಮುದಾಯ ಶೌಚಾಲಯ ನಿರ್ಮಾಣ ಸೇರಿ ಅಂದಾಜು 2 ಕಿ.ಮೀ ಡಾಂಬರೀಕರಣ, 2 ಕಿ.ಮೀ ಚರಂಡಿ ನಿರ್ಮಾಣ ಮತ್ತು 2 ಕಿ.ಮೀನಷ್ಟು ಪೆವರ್ಸ್ ಹಾಕುವ ಕಾಮಗಾರಿಗಳಲ್ಲಿ ಕೆಲವು ಮಾತ್ರ ಪೂರ್ಣಗೊಂಡು ಬಹುತೇಕ ಕಾಮಗಾರಿಗಳಿಗೆ ಗ್ರಹಣ ಹಿಡಿದಂತಾಗಿದೆ.



ನಗರೋತ್ಥಾನ ಕಾಮಗಾರಿಗೆ ಭೂಮಿಪೂಜೆ ನೆರವೇರಿ ವರ್ಷಗಳೇ ಗತಿಸಿವೆ. ಈಗಾಗಲೇ ಗುತ್ತಿಗೆದಾರರಿಗೆ 2.5 ಕೋಟಿ ರೂ ಬಿಲ್ ಪಾವತಿಯಾಗಿದೆ. ಕೆಲ ವಾರ್ಡ್‌ಗಳಲ್ಲಿ ಸದಸ್ಯರ ಒತ್ತಾಯದ ಮೇರೆಗೆ ಅರೆಬರೆ ಕಾಮಗಾರಿ ಮಾಡಲಾಗಿದೆ. ಪಟ್ಟಣದಲ್ಲಿ ನಾಲ್ಕೈದು ವರ್ಷಗಳ ಹಿಂದೆ ನಡೆದ ಅಂದಾಜು 40 ಕೋಟಿಗೂ ಹೆಚ್ಚು ರೂಪಾಯಿ ವೆಚ್ಚದ ಒಳಚರಂಡಿ ಕಾಮಗಾರಿ ಸಂಪೂರ್ಣ ಹಳ್ಳ ಹಿಡಿದಿದ್ದಲ್ಲದೇ ಉತ್ತಮವಾಗಿಯೇ ಇದ್ದ ರಸ್ತೆಗಳೂ ಹಾಳಾಗಿವೆ.



> ನಗರೋತ್ಥಾನ ಕಾಮಗಾರಿಗಳ ನಿಧಾನಗತಿಯ ಬಗ್ಗೆ ಜಿಲ್ಲಾ ನಗರಾಭಿವೃದ್ಧಿ ಕೋಶದ ಅಧಿಕಾರಿಗಳು, ಇಂಜಿನಿಯರ್‌ಗಳಿಗೆ ಮಾಹಿತಿ ನೀಡಿದ್ದೇನೆ. ಕೆಲ ಕಡೆ ಟೆಂಡರ್ ಕರೆದು ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಸಬೇಕಾಗಿದ್ದರಿಂದ ಕಾಮಗಾರಿ ಅರ್ಧಕ್ಕೆ ನಿಂತಿದ್ದು, ಒಂದು ವಾರದಲ್ಲಿ ಪೈಪ್‌ಲೈನ್ ಕಾಮಗಾರಿ ಪೂರ್ಣಗೊಳಿಸಿ ರಸ್ತೆ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಸೂಚಿಸಲಾಗುವುದು.
>
> **- ಮಹೇಶ ಹಡಪದ.**
> ಪ.ಪಂ ಮುಖ್ಯಾಧಿಕಾರಿ.

ಪಟ್ಟಣದ ಬಹುತೇಕ ವಾರ್ಡ್‌ಗಳಲ್ಲಿ ಮಳೆಗಾಲದಲ್ಲಿ ರಸ್ತೆಗಳು ಕೆಸರಿನಿಂದ, ಬೇಸಿಗೆಯಲ್ಲಿ ಧೂಳಿನಿಂದ ಕೂಡಿರುತ್ತವೆ. ಜನರ ಪರದಾಟ, ನಿತ್ಯ ಯಾತನೆ ತಪ್ಪದಾಗಿದೆ. ಈ ನಡುವೆ ಪುರಸಭೆಯ ಅನುದಾನದಲ್ಲಿ ನಡೆದ ಒಂದಷ್ಟು ಕಾಮಗಾರಿಗಳು ಕಳಪೆಯಿಂದ ಹೇಳ ಹೆಸರಿಲ್ಲದಂತಾಗಿವೆ. ಹತ್ತಾರು ವರ್ಷಗಳಿಂದ ದುರಸ್ಥಿಯನ್ನೇ ಕಾಣದ ಪಟ್ಟಣದಲ್ಲಿನ ರಸ್ತೆಗಳ ಗುಂಡಿ ಮುಚ್ಚಲೆಂದೇ ಲಕ್ಷಾಂತರ ರೂ ಅನುದಾನ ಪೋಲಾಗಿದೆ.

> ಪಟ್ಟಣದ ಬಳಿಗಾರ ಓಣಿಯಿಂದ ಸೋಮೇಶ್ವರ ತೇರಿನ ಮನೆವರೆಗಿನ ರಸ್ತೆಯನ್ನು 2 ತಿಂಗಳ ಹಿಂದೆಯೇ ಬೇಕಾಬಿಟ್ಟು ಅಗೆದು ಬಿಟ್ಟಿದ್ದಾ- ರೆ. ರಸ್ತೆಯುದ್ದಕ್ಕೂ ನೀರು, ಕೊಳಚೆ, ತ್ಯಾಜ್ಯ ತುಂಬಿಕೊಂಡು ಸಂಚಾರ ನರಕಸದೃಶವಾಗಿದೆ. ಈ ಪ್ರದೇಶದ ಜನರು, ರೈತರು, ಮಕ್ಕಳು, ವೃದ್ಧರು ಕೆಸರು ರಸ್ತೆಯಲ್ಲಿ ಪಡಬಾರದ ಯಾತನೆ ಅನುಭವಿಸುತ್ತಿದ್ದಾರೆ. ಸಂಬಂಧಪಟ್ಟವರು ಗಮನವಹಿಸಿ ಮೂರ್ನಾಲ್ಕು ದಿನಗಳಲ್ಲಿ ರಸ್ತೆ ಕಾಮಗಾರಿ ಪ್ರಾರಂಭಿಸದಿದ್ದರೆ ಪುರಸಭೆ ಮುಂದೆ ರೈತರೊಡಗೂಡಿ ಪ್ರತಿಭಟನೆ ಮಾಡುತ್ತೇವೆ.
>
> **- ನಾಗರಾಜ ಚಿಂಚಲಿ.**
> ಸ್ಥಳೀಯ ನಿವಾಸಿ.

9 ತಿಂಗಳಲ್ಲಿ ಪೂರ್ಣಗೊಳ್ಳಬೇಕಿದ್ದ ಕಾಮಗಾರಿಗಳು ಒಂದೂವರೆ ವರ್ಷ ಕಳೆದರೂ ಮುಗಿದಿಲ್ಲ. ಗುತ್ತಿಗೆದಾರರು ಯಾರ ಮಾತಿಗೂ ಕ್ಯಾರೇ ಎನ್ನುತ್ತಿಲ್ಲ. ಅಧಿಕಾರಿಗಳೂ ಈ ಬಗ್ಗೆ ಕ್ರಮ ಕೈಗೊಳ್ಳುತ್ತಿಲ್ಲ. ಬೇಸಿಗೆ ಕಾಲದಲ್ಲಿ ಮಾಡಬೇಕಿದ್ದ ರಸ್ತೆ ಕಾಮಗಾರಿಗಳನ್ನು ಮಳೆಗಾಲದಲ್ಲಿ ಪ್ರಾರಂಭಿಸಿ 2 ತಿಂಗಳಿಂದ ಅರ್ಧಕ್ಕೆ ಕೈಬಿಟ್ಟಿದ್ದಾರೆ. ಇದರಿಂದ ರಸ್ತೆಗಳ ಸಂಚಾರ ಸಂಪೂರ್ಣ ಸ್ಥಗಿತಗೊಂಡಿವೆ ಮತ್ತು ಅಗೆದು ಬಿಟ್ಟ ರಸ್ತೆಯಲ್ಲಿ ಮೊಣಕಾಲವರೆಗೆ ನೀರು ನಿಲ್ಲುವಂತಾಗಿದೆ. ಜನರು ನರಕಯಾತನೆ ಅನುಭವಿಸುತ್ತ ಜನಪ್ರತಿನಿಧಿಗಳು, ಅಧಿಕಾರಿಗಳಿಗೆ ಹಿಡಿಶಾಪ ಹಾಕುತ್ತಿದ್ದಾರೆ.

ಆದರೆ ಈ ಬಗ್ಗೆ ನಿಗಾ ವಹಿಸಬೇಕಿದ್ದ ಅಧಿಕಾರಿಗಳು ಇತ್ತ ಕಣ್ಣೆತ್ತಿಯೂ ನೋಡುತ್ತಿಲ್ಲ ಮತ್ತು ಸರಿಯಾದ ಮಾಹಿತಿಯನ್ನೂ ನೀಡುತ್ತಿಲ್ಲ. ಜನರು ಕೇಳುವ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾದ ನಾವು ಕಣ್ತಪ್ಪಿಸಿ ಅಡ್ಡಾಡುವಂತಾಗಿದೆ ಎಂಬ ಅಸಮಾಧಾನದ ಮಾತುಗಳು ಸದಸ್ಯರಿಂದ ಕೇಳಿ ಬರುತ್ತಿವೆ.

### ಕದಂಬ ಸೈನ್ಯದ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್‌ರಿಂದ ಸರಕಾರಕ್ಕೆ ಒತ್ತಾಯ

# ಕನ್ನಡಿಗರಿಗೆ ಉದ್ಯೋಗ ಕೊಡಿಸಿ

**■ವಿಜಯಸಾಕ್ಷಿ ಸುದ್ದಿ, ಗದಗ**

ಕನ್ನಡ ನಾಡಿನಲ್ಲಿ ಕನ್ನಡಿಗರಿಗೆ ಉದ್ಯೋಗ ನೀಡದೇ ಖಾಸಗಿ ಕಂಪನಿಗಳು ದ್ರೋಹ ಮಾಡುತ್ತಿವೆ. ಈ ಕೂಗು ಕೇವಲ ಇಂದು ನಿನ್ನೆಯದಲ್ಲ. ಖಾಸಗಿ ಕಂಪನಿಗಳು ಕರ್ನಾಟಕದಲ್ಲಿ ಹುಟ್ಟಿದಾಗಿನಿಂದಲೂ ಇದೆ. ಈ ಬಗ್ಗೆ ರಾಜ್ಯ ಸರಕಾರಕ್ಕೆ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತಿದ್ದು, ಇದನ್ನು ಖಂಡಿಸಿ ಆ.5ರಿಂದ 22ರವರೆಗೆ ರಾಜ್ಯಾದ್ಯಂತ ಕದಂಬ ಸೈನ್ಯದಿಂದ ಹೋರಾಟ ಮಾಡಲಾಗುವುದು ಎಂದು ಕದಂಬ ಸೈನ್ಯದ ರಾಜ್ಯಾಧ್ಯಕ್ಷ ಬೇಕ್ರಿ ರಮೇಶ್ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ನಗರದ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೇರೆ ರಾಜ್ಯಗಳಲ್ಲಿ ಸ್ಥಳೀಯ ಯುವಕರಿಗೆ ಶೇ 50-80ರಷ್ಟು ಮೀಸಲಾತಿ ಇದೆ. ಆದರೆ, ರಾಜ್ಯದಲ್ಲಿ ಕಾನೂನುಗಳು ಹಲ್ಲು ಕಿತ್ತ ಹಾವಿನಂತಾಗಿವೆ. ಹೋರಾಟ, ಧರಣಿ, ಸತ್ಯಾಗ್ರಹ ನಡೆಯುತ್ತಲೇ ಇವೆ. ಖಾಸಗಿ ಕಂಪನಿಗಳು ಕನ್ನಡಿಗರಿಗೆ ಉದ್ಯೋಗ ನೀಡಿದರೆ ಕನ್ನಡದ ಯುವಕರು ಆರ್ಥಿಕವಾಗಿ ಸಬಲರಾಗುತ್ತಾರೆ. ಖಾಸಗಿ ಕಂಪನಿಗಳಿಗೆ ನಮ್ಮ ಸರ್ಕಾರ ನೆಲ, ಜಲ, ನೀರು, ವಿದ್ಯುತ್ ಸೇರಿದಂತೆ ಎಲ್ಲ ಸೌಲಭ್ಯಗಳನ್ನು ನೀಡುತ್ತಿವೆ. ಆದರೆ, ಬೆರಳೆಣಿಕೆ ಕನ್ನಡಿಗರಿಗೆ ಉದ್ಯೋಗ ನೀಡುತ್ತಿವೆ. ಈ ಸರಕಾರ ಕನ್ನಡಿಗರಿಗೆ ಉದ್ಯೋಗ ನೀಡಬೇಕಾದರೆ ಕನ್ನಡಿಗರಿಗೆ ಉದ್ಯೋಗದಾತೆ ಡಾ.ಸರೋಜಿನಿ ಮಹಿಷಿ ಪರಿಷ್ಕೃತ ವರದಿ ಜಾರಿಗೆ ತರಬೇಕು ಎಂದು ಒತ್ತಾಯಿಸಿದರು.




ಕರ್ನಾಟಕದಲ್ಲಿ ಹಿಂದಿ ಹೇರಿಕೆ ಇತ್ತೀಚಿನ ದಿನಗಳಲ್ಲಿ ವಿಪರಿತವಾಗಿದೆ. ನಮಗೆ ದ್ವಿಭಾಷೆ ನೀತಿ ಬೇಕು. ಆದರೆ, ಹಿಂದಿ ಹೇರಿಕೆ ಭಾಷಾ ಸಾಮ್ರಾಜ್ಯ ಶಾಹಿತ್ವದ ಒಂದು ರೂಪವಾಗಿದೆ. ಭಾಷೆಯ ಬಗ್ಗೆ ಪರಿಸ್ಥಿತಿ ಹೀಗೆ ಮುಂದುವರೆದರೆ ದೇಸೀ ಭಾಷೆಗಳ ಸಾವು ಖಚಿತ. ರಾಜ್ಯದ ಎಲ್ಲ ಕೇಂದ್ರ ಕಛೇರಿಗಳಲ್ಲಿ ಶೇ. 80 ಹಿಂದಿ ಭಾಷಿಗರೇ ತುಂಬಿದ್ದಾರೆ. ಪರೀಕ್ಷೆಗಳಲ್ಲಿಯೂ ಹಿಂದಿ ಹೇರಿಕೆಯಾಗುತ್ತಿರುವುದು ಬೇಸರದ ಸಂಗತಿ. ಪ್ರಾಧಿಕಾರ ಇದ್ದರೂ ಏನೂ ತಿಳಿಯದಂತೆ ಮೌನವಾಗಿರುವುದು ಸರಿಯಾದ ಕ್ರಮವಲ್ಲ ಎಂದು ಅಸಮಾಧಾನ ಹೊರ ಹಾಕಿದರು.

ಸುದ್ದಿಗೋಷ್ಠಿಯಲ್ಲಿ ಅಬ್ಬಿಗೇರಿಯ ಯಲ್ಲಾಲಿಂಗಸ್ವಾಮಿ ಮಠದ ಬಸವರಾಜ ಶರಣರು, ಕದಂಬ ಸೈನ್ಯದ ರಾಜ್ಯ ಸಹ ಕಾರ್ಯದರ್ಶಿ ಉಮ್ಮಡಹಳ್ಳಿ ನಾಗೇಶ, ಗದಗ ಜಿಲ್ಲಾ ಮುಖಂಡ ಗವಿಸಿದ್ದಯ್ಯ ಹಳ್ಳಿಕೇರಿಮಠ, ಕಬಾಡಿ, ಬೆಳಗಾವಿ ಜಿಲ್ಲಾಧ್ಯಕ್ಷ ಪ್ರಕಾಶ ರಾಮದುರ್ಗ, ಕರ್ನಟಕ ರಾಜ್ಯ ಪಂ.ಪುಟ್ಟರಾಜ ರೈತ ಸಂಘದ ರಾಜ್ಯಾಧ್ಯಕ್ಷ ಎಂ.ಪಿ. ಮುಳಗುಂದ, ಮಹದಾಯಿ ಹೋರಾಟಗಾರ ರಮೇಶ ನಾಯ್ಕರ ಮುಂತಾದವರಿದ್ದರು.

> ಕನ್ನಡಿಗರನ್ನು ಒಗ್ಗೂಡಿಸಲು ಹೋರಾಡಿದ ಕದಂಬ ಮಯೂರವರ್ಮ ಪ್ರತಿಮೆಯನ್ನು ಬನವಾಸಿ, ಶಿರಸಿಯಲ್ಲಿ ಸ್ಥಾಪಿಸುವಂತೆ, ಚಾಲುಕ್ಯ ಸಾಮ್ರಾಜ್ಯದ ಇಮ್ಮಡಿ ಪುಲಕೇಶಿಯ ಪುತ್ಥಳಿಯನ್ನು ಬಾದಾಮಿ, ಬೆಂಗಳೂರಿನ ವಿಧಾನಸೌಧ, ಬೆಳಗಾವಿಯ ಸುವರ್ಣ ಸೌಧದ ಮುಂದೆ ಸ್ಥಾಪಿಸುವಂತೆ ಹಲವಾರು ವರ್ಷಗಳಿಂದ ಕದಂಬ ಸೈನ್ಯದಿಂದ ಮನವಿ ಮಾಡಿಕೊಂಡು ಬಂದರೂ ಸರ್ಕಾರ ಕಣ್ಣು ತೆರೆಯುತ್ತಿಲ್ಲ. ಹೊರ ರಾಜ್ಯದ ಸಾಮ್ರಾಟರ ಪುತ್ಥಳಿಗಳು ಕರ್ನಾಟಕದಾದ್ಯಂತ ಇವೆ. ಆದರೆ, ನಮ್ಮ ನಾಡಿನ ಶೂರರ ಪ್ರತಿಮೆ ಇಲ್ಲದಿರುವುದು ವಿಪರ್ಯಾಸ ಎಂದು ಬೇಕ್ರಿ ರಮೇಶ್ ಬೇಸರ ವ್ಯಕ್ತಪಡಿಸಿದರು.

## ಮಾನವೀಯತೆ ಮೆರೆದ 'ಪ್ರವಾಸಿ ಮಿತ್ರ'

**■ವಿಜಯಸಾಕ್ಷಿ ಸುದ್ದಿ, ಗದಗ**

ಜಿಲ್ಲೆಯ ಪ್ರವಾಸಿ ಸ್ಥಳಗಳಲ್ಲೊಂದಾದ ಶ್ರೀ ತ್ರಿಕೂಟೇಶ್ವರ ದೇವಸ್ಥಾನದಲ್ಲಿ ಜುಲೈ 15ರಂದುಬೆಳಿಗ್ಗೆ ದೇವರ ಸ್ವರೂಪವೆಂದು ಪೂಜಿಸುವ ಗೂಳಿಯೊಂದು ಅಪಘಾತದಲ್ಲಿ ಗಾಯಗೊಂಡು ದೇವಸ್ಥಾನದ ಒಳಗೆ ಬಂದು ತೀವ್ರ ರಕ್ತಸ್ರಾವದಿಂದ ನರಳಾಡಿ ಬಳಲುತ್ತಿತ್ತು.

ದೇವಸ್ಥಾನಕ್ಕೆ ವೀಕ್ಷಣೆಗೆಂದು ಬರುವ ಪ್ರವಾಸಿಗರಿಗೆ ಮಾಹಿತಿ ಹಾಗೂ ಸುರಕ್ಷತೆ ಒದಗಿಸುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ 'ಪ್ರವಾಸಿ ಮಿತ್ರ' ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಸರಿತಾ ಎಲ್.ಬುಟ್ಟಿ ಕೊರವರ ಮತ್ತು ಕನಕರಾಜ ಹು. ಮೂಲಿಮನಿಯವರು ಆ ಮೂಕ ಪ್ರಾಣಿಯ ರೋದನೆ ಕಂಡು ಕೂಡಲೇ ಪಶು ಸಂರಕ್ಷಣಾ ಸಹಾಯವಾಣಿಗೆ ಕರೆ ಮಾಡಿ ಪಶು ವೈದ್ಯಾಧಿಕಾರಿಗಳಿಗೆ ಮಾಹಿತಿ ತಿಳಿಸಿದರು.

ಮಾಹಿತಿ ಪಡೆದ ಪಶು ವೈದ್ಯಾಧಿಕಾರಿಗಳು ಅವರ ತಂಡದೊಂದಿಗೆ ದೇವಸ್ಥಾನಕ್ಕೆ ಬಂದು ತೀವ್ರವಾಗಿ ಗಾಯಗೊಂಡ ಗೂಳಿಗೆ ಚಿಕಿತ್ಸೆ ನೀಡಿ, ಮೂಕ ಪ್ರಾಣಿಯ ಜೀವ ಉಳಿಸಿದರು. 'ಪ್ರವಾಸಿ ಮಿತ್ರ' ಸಿಬ್ಬಂದಿಯವರ ಸಮಯ ಪ್ರಜ್ಞೆಯಿಂದ ಸಿಕ್ಕ ಮಾಹಿಯ ಮೇರೆಗೆ ಒಂದು ಜೀವ ಉಳಿದಿದೆ ಎಂದು ಪಶು ವೈದ್ಯಾಧಿಕಾರಿಗಳು ಶ್ಲಾಘಿಸಿದರು.



## ಲೋಕ ಅದಾಲತ್‌ನಲ್ಲಿ ಮತ್ತೆ ಒಂದಾದ ದಂಪತಿಗಳು

**■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ**

ಪಟ್ಟಣದ ಹಿರಿಯ ದಿವಾಣಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ ಮತ್ತು ದಿವಾಣಿ ನ್ಯಾಯಾಲಯದಲ್ಲಿ ಶನಿವಾರ ನಡೆದ ಲೋಕ ಅದಾಲತ್‌ನಲ್ಲಿ 380ಕ್ಕೂ ಅಧಿಕ ಪ್ರಕರಣಗಳನ್ನು ರಾಜೀ ಸಂಧಾನದ ಮೂಲಕ ಬಗೆಹರಿಸಲಾಯಿತು.

ಪಟ್ಟಣದ ಹಿರಿಯ ದಿವಾಣಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ದಿವಾಣಿ ನ್ಯಾಯಾಲಯ ಮತ್ತು ಜೆಎಂಎಫ್‌ಸಿ ನಡೆದ ರಾಷ್ಟ್ರೀಯ ಲೋಕ ಅದಾಲತ್‌ನಲ್ಲಿ ಸುಮಾರು 41 ಸಿವಿಲ್ ಪ್ರಕರಣಗಳು, 260ಕ್ಕೂ ಹೆಚ್ಚಿನ ಕ್ರಿಮಿನಲ್ ಪ್ರಕರಣಗಳನ್ನು ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳೆಂದು ಪರಿಗಣಿಸಿದ ಬ್ಯಾಂಕ್‌ನಿಂದ ಸಲ್ಲಿಕೆಯಾದ ಸುಮಾರು 80ಕ್ಕೂ ಹೆಚ್ಚಿನ ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಬಗೆಹರಿಸಲಾಯಿತು. ವಿಶೇಷವಾಗಿ, ಸಣ್ಣ ಪುಟ್ಟ ಕಾರಣಗಳಿಂದ ವಿವಾಹ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸಿದ್ದ ಒಂದು ಜೋಡಿಯನ್ನು ನ್ಯಾಯಾಧೀಶರ ಸಮ್ಮುಖದಲ್ಲಿ ತಿಳಿ ಹೇಳಿ ದಾಂಪತ್ಯ ಜೀವನವನ್ನು ಸರಿಪಡಿಸಲಾಯಿತು.



ನ್ಯಾಯಾಧೀಶರಾದ ಪದ್ಮಶ್ರೀ ಪಾಟೀಲ್, ಸಂಧಾನಕಾರರಾದ ಎಸ್.ಎಚ್. ಮುಳಗುಂದ ಹಾಗೂ ವಿವಾಹ ವಿಚ್ಛೇದನಕ್ಕೆ ಅರ್ಜಿಸಲ್ಲಿಸಿದ್ದವರ ಪರವಾಗಿ ಎನ್.ಸಿ. ಪಾಟೀಲ್, ಮತ್ತು ವಿ.ಕೆ. ನಾಯಕ್ ವಕೀಲರುಗಳು ಅವರಿಗೆ ತಿಳಿ ಹೇಳಿ ಅವರ ದಾಂಪತ್ಯ ಜೀವನವನ್ನು ಸರಿಪಡಿಸಿ, ಮತ್ತೆ ಉತ್ತಮವಾಗಿ ಜೀವನ ನಡೆಸಲು ತಿಳಿಸಿದರು. ಇಬ್ಬರು ಪರಸ್ಪರ ಒಪ್ಪಿಗೆ ಸೂಚಿಸಿದ್ದರಿಂದ ಈ ಜೋಡಿಗೆ ಹಾರ ಬದಲಾಯಿಸಿ ಸಿಹಿ ನೀಡಲಾಯಿತು. ನ್ಯಾಯಾಧೀಶರಾದ ಪದ್ಮಶ್ರೀ ಪಾಟೀಲ್ ಮತ್ತು ಸತೀಶ ಎಂ. ನ್ಯಾಯಾಧೀಶರು ಈ ಜೋಡಿಯ ಹೊಸ ಜೀವನಕ್ಕೆ ಸಾಕ್ಷಿಯಾದರು.

ಈ ಸಂದರ್ಭದಲ್ಲಿ ಸಹಾಯಕ ಅಭಿಯೋಜಕರಾದ ಹೀನಾಕೌಸರ ಗಂಜಿಹಾಳ, ವಕೀಲರ ಸಂಘದ ಅಧ್ಯಕ್ಷ ಬಿ.ಎಸ್. ಬಾಳೇಶ್ವರಮಠ, ಬಿ.ಎಸ್. ಪಾಟೀಲ್, ಎನ್.ಐ. ಬೆಲ್ಲದ, ಎನ್.ಐ. ಸೊರಟೂರ, ಎಸ್.ಸಿ. ನರಸಮ್ಮನವರ, ಕೆ.ಬಿ. ನಾಯಕ್ ಸೇರಿದಂತೆ ಹಲವಾರು ಹಿರಿ-ಕಿರಿಯ ವಕೀಲರು ಹಾಗೂ ನ್ಯಾಯಾಲಯದ ಸಿಬ್ಬಂದಿ ಉಪಸ್ಥಿತರಿದ್ದರು.

## ಸಂಪಾದಕೀಯ

# ಬಿಜೆಪಿ ಬಲ ಕುಂಠಿತ

ಪ್ರಸಕ್ತ ಲೋಕಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಒಳಗೊಂಡ ಇಂಡಿಯಾ ಮೈತ್ರಿಕೂಟ ಅಚ್ಚರಿಯ ಫಲಿತಾಂಶವನ್ನು ನೀಡುವ ಮೂಲಕ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳಿಗೆ ಭಾರಿ ಆಘಾತವನ್ನು ನೀಡಿತು. ಈಗ ರಾಜ್ಯಸಭೆಯಲ್ಲೂ ಇಂಡಿಯಾ ಮೈತ್ರಿಕೂಟದ ಬಲ ವೃದ್ಧಿಯಾಗಿದೆ.

ಲೋಕಸಭೆಯಲ್ಲಿ ಕಾಂಗ್ರೆಸ್ ಒಳಗೊಂಡ ಇಂಡಿಯಾ ಮೈತ್ರಿಕೂಟ ಬಹುಮತ ಸಾಧಿಸದಿದ್ದರೂ ಒಂದು ಪ್ರಬಲ ಪ್ರತಿಪಕ್ಷವಾಗಿ ಹೊರಹೊಮ್ಮಿದೆ. ಅದಕ್ಕಿಂತ ಮಿಗಿಲಾಗಿ ಬಿಜೆಪಿ ದುರಾಡಳಿತದ ವಿರುದ್ಧ ಒಂದು ಸಂಘಟಿತ ಶಕ್ತಿಯಾಗಿ ಹೊರಹೊಮ್ಮಿರುವುದು ಬಿಜೆಪಿ ಮತ್ತು ಮಿತ್ರ ಪಕ್ಷಗಳಿಗೆ ಸಂಕಷ್ಟವನ್ನು ತಂದೊಡ್ಡಿದೆ.

ಈ ಬಾರಿ 400ಕ್ಕೂ ಹೆಚ್ಚು ಸ್ಥಾನಗಳನ್ನ ಗೆದ್ದು ಭಾರಿ ಬಹುಮತದೊಂದಿಗೆ ಅಧಿಕಾರ ನಡೆಸುವ ಕನಸಿನಲ್ಲಿದ್ದ ಬಿಜೆಪಿ, ಮಿತ್ರ ಪಕ್ಷಗಳ ನೆರವು ಇಲ್ಲದೆ ಅಧಿಕಾರಕ್ಕೆ ಬರಲು ಸಾಧ್ಯವಾಗದಂತಹ ಪರಿಸ್ಥಿತಿ ತಂದುಕೊಂಡಿತು. ಆ ಮೂಲಕ ಲೋಕಸಭೆಯಲ್ಲಿ ಸಂಖ್ಯಾಬಲ ಉಳಿಸಿಕೊಂಡಿದ್ದರೆ ರಾಜ್ಯಸಭೆಯಲ್ಲಿ ಕಳೆದುಕೊಂಡಿದೆ.

ಸದ್ಯ ರಾಜ್ಯಸಭೆಯ ಒಟ್ಟು ಸ್ಥಾನಗಳ ಪೈಕಿ ಬಿಜೆಪಿಗೂ ಸ್ಪಷ್ಟ ಬಹುಮತ ಇಲ್ಲವಾಗಿದೆ. ಒಟ್ಟು 245 ಸ್ಥಾನಗಳ ಪೈಕಿ 19 ಸ್ಥಾನಗಳು ಸದ್ಯ ಖಾಲಿ ಇವೆ. ಸದ್ಯ 266 ಸಂಖ್ಯಾಬಲ ಹೊಂದಿರುವ ರಾಜ್ಯ ಸಭೆಯಲ್ಲಿ ಬಹುಮತಕ್ಕೆ 114 ಸ್ಥಾನಗಳು ಬೇಕು. ಇತ್ತ ಕಾಂಗ್ರೆಸ್ ಪಕ್ಷವೂ ರಾಜ್ಯಸಭೆಯಲ್ಲಿ ಸ್ಪಷ್ಟ ಬಹುಮತ ಹೊಂದಿಲ್ಲ. ಆದರೆ ಪಕ್ಷೇತರರ ನೆರವು ಪಡೆದುಕೊಂಡಲ್ಲಿ ಇಂಡಿಯಾ ಮೈತ್ರಿಕೂಟದಷ್ಟೇ ಸಂಖ್ಯಾಬಲ ವೃದ್ಧಿಸಿಕೊಳ್ಳಲು ಸಾಧ್ಯವಿದೆ.

ಸಂಖ್ಯಾಬಲದ ರಾಜಕಾರಣ ಏನೇ ಇರಲಿ, ಇನ್ನು ಮುಂದೆ ಲೋಕಸಭೆಯಲ್ಲಿ ಪಾಸ್ ಆಗುವ ಮಸೂದೆಗಳು ರಾಜ್ಯಸಭೆಯಲ್ಲಿ ಅಷ್ಟು ಸುಲಭವಾಗಿ ಪಾಸ್ ಆಗುವುದಿಲ್ಲ. ಲೋಕಸಭೆಯಲ್ಲಿ ಇಂಡಿಯ ಮೈತ್ರಿಕೂಟದ ಸರ್ಕಾರ ಮಸೂದೆ ಮಂಡನೆಯಲ್ಲಿ ಎಚ್ಚರಿಕೆಯ ಹೆಜ್ಜೆಗಳನ್ನ ಇಡಬೇಕಾದ ಪರಿಸ್ಥಿತಿ ಬಂದಿದೆ.

## ವಿಚಾರಣೆಯಿಲ್ಲದೆ 1,402 ದಿನಗಳನ್ನು ಜೈಲಿನಲ್ಲಿ ಪೂರ್ಣಗೊಳಿಸಿದ ಉಮರ್ ಖಾಲಿದ್



**■ವಿಜಯಸಾಕ್ಷಿ ಸುದ್ದಿ, ನವದೆಹಲಿ**

ನವದೆಹಲಿಯ ತಿಹಾರ್ ಜೈಲಿನಲ್ಲಿರುವ ಗರಿಷ್ಠ ಭದ್ರತಾ ಜೈಲಿನೊಳಗೆ, ಶನಿವಾರ 1,400 ದಿನಗಳನ್ನು ವಿಚಾರಣೆಯಿಲ್ಲದೆ ಪೂರ್ಣಗೊಳಿಸಿದ ಉಮರ್ ಖಾಲಿದ್, ಫ್ಯೋಡರ್ ದೋಸ್ಟೋವ್ಸ್ಕಿಯ 'ದಿ ಬ್ರದರ್ಸ್ ಕರಮಜೋವ್' ಮತ್ತು ಮನೋಜ್ ಮಿತ್ತಾ ಅವರ ಹಿಂದೂ ಭಾರತದಲ್ಲಿ ಜಾತಿ ಹೆಮ್ಮೆ: ಸಮಾನತೆಯ ಹೋರಾಟದಲ್ಲಿ" ಓದುತ್ತಿದ್ದಾರೆಎಂದು 'ದಿ ಟೆಲಿಗ್ರಾಫ್' ವರದಿ ಮಾಡಿದೆ.

ಖಾಲಿದ್ ಜೆಎನ್‌ಯುನಿಂದ 'ಜಾರ್ಖಂಡ್‌ನ ಆದಿವಾಸಿಗಳ ಮೇಲಿನ ನಿಯಮದ ಸ್ಪರ್ಧಾತ್ಮಕ ಹಕ್ಕುಗಳು ಮತ್ತು ಆಕಸ್ಮಿಕಗಳು' ಕುರಿತು ಪಿಎಚ್‌ಡಿ ಮಾಡಿದರು. ವಿಶ್ವವಿದ್ಯಾನಿಲಯವು ಆರಂಭದಲ್ಲಿ ಪ್ರಬಂಧವನ್ನು ಸ್ವೀಕರಿಸಲು ನಿರಾಕರಿಸಿತ್ತು ಮತ್ತು 2018 ರಲ್ಲಿ ನ್ಯಾಯಾಲಯದ ಸೂಚನೆ ನಂತರ ಅಂಗೀಕರಿಸಿತು.

ಫೆಬ್ರವರಿ 9, 2016ರ ಘಟನೆಗಳ ತನಿಖೆಗಾಗಿ ಜೆಎನ್‌ಯು ಅಧಿಕಾರಿಗಳು ರಚಿಸಿದ ಸಮಿತಿಯಿಂದ ಅವರನ್ನು ಅಮಾನತುಗೊಳಸಿಲಾಗಿತ್ತು. ಇದು ಅವರನ್ನು ಜೆಎನ್‌ಯುನ ಇತರ ವಿದ್ಯಾರ್ಥಿ ನಾಯಕರಾದ ಕನ್ಹಯ್ಯಾ ಕುಮಾರ್ ಮತ್ತು ಶೆಹ್ಲಾ ರಶೀದ್ ಅವರೊಂದಿಗೆ ಬೆಳಕಿಗೆ ತಂದಿತು. ಈ ಎಂಟು ವರ್ಷಗಳಲ್ಲಿ ಅವರೆಲ್ಲರೂ ಪ್ರತ್ಯೇಕ ರಾಜಕೀಯ ದಿಕ್ಕುಗಳಲ್ಲಿ ಸಾಗಿದ್ದಾರೆ.

ತನ್ನ ವಿರುದ್ಧ "ಬಲವಂತದ ಕ್ರಮ" ತೆಗೆದುಕೊಳ್ಳದಂತೆ ನ್ಯಾಯಾಲಯವು ಜೆಎನ್‌ಯು ಅಧಿಕಾರಿಗಳಿಗೆ ನಿರ್ದೇಶನ ನೀಡಿದ್ದರೂ, ಯೂನಿವರ್ಸಿಟಿ ಅಧಿಕಾರಿಗಳು ಅದನ್ನು ಸ್ವೀಕರಿಸಲು ನಿರಾಕರಿಸಿದ್ದಾರೆ ಎಂದು ಖಾಲಿದ್ ನಂತರ ಆರೋಪಿಸಿದರು. ಆಗಸ್ಟ್ 2, 2018 ರಂದು ಜೆಎನ್‌ಯು ಅವರ ಪಿಎಚ್‌ಡಿ ಪ್ರಬಂಧ ಸಲ್ಲಿಕೆಯನ್ನು ಒಪ್ಪಿಕೊಂಡಿತು.

ಅವರ ಉತ್ಸಾಹವು ಇನ್ನೂ ಹೆಚ್ಚಾಗಿರುತ್ತದೆ, ಆದರೂ ವಿಳಂಬಗಳು ಕೆಲವೊಮ್ಮೆ ಅವರನ್ನು ಕುಗ್ಗಿಸುತ್ತವೆ. ಮಿತಿಮೀರಿದ ವಿಳಂಬಗಳು ಪರಿಸ್ಥಿತಿಯನ್ನು ಅತ್ಯಂತ ನಿರಾಶಾದಾಯಕವಾಗಿಸಿದೆ" ಎಂದು ಉಮರ್ ಅವರ ಒಡನಾಡಿ ಬನೋಜ್ಯೋತ್ಸ್ನಾ ಲಾಹಿರಿ ಸೋಮವಾರ ತಿಳಿಸಿದ್ದಾರೆ ಎಂದು ದಿ ಟೆಲಿಗ್ರಾಫ್ ವರದಿ ಮಾಡಿದೆ.

ಲಾಹಿರಿ ಕಳೆದ ವಾರ ತಿಹಾರ್‌ನಲ್ಲಿ ಉಮರ್‌ನನ್ನು ಭೇಟಿಯಾಗಿದ್ದ. ಅವರು ವಾರಕ್ಕೊಮ್ಮೆ ಸಂದರ್ಶಕರನ್ನು ಅನುಮತಿಸುತ್ತಾರೆ. "ಅವರು ದೋಸ್ಟೋವ್ಸ್ಕಿ ಮತ್ತು ಮನೋಜ್ ಮಿಟ್ಟಾ ಓದುತ್ತಿದ್ದಾರೆ. ಅವರ ಓದುವ ಹವ್ಯಾಸವೇ ಹಾಗೆ" ಎಂದು ಲಹಿರಿ ಹೇಳಿದರು.

ದೆಹಲಿ ಪೊಲೀಸರು 2020 ರ ಸೆಪ್ಟೆಂಬರ್‌ನಲ್ಲಿ ಖಾಲಿದ್‌ನನ್ನು ಬಂಧಿಸಿದರು. ವಿವಾದಿತ ಪೌರತ್ವ ತಿದ್ದುಪಡಿ ಕಾಯ್ದೆ ಮತ್ತು ನಾಗರಿಕರ ರಾಷ್ಟ್ರೀಯ ನೋಂದಣಿ ವಿರುದ್ಧದ ತಿಂಗಳುಗಳ ಬೃಹತ್ ಪ್ರತಿಭಟನೆಗಳ ನಂತರ 53 ಜನರನ್ನು ಕೊಂದ 2020ರ ದೆಹಲಿ ಗಲಭೆಯಲ್ಲಿ "ಪ್ರಮುಖ ಪಿತೂರಿದಾರ" ಎಂದು ಆರೋಪಿಸಲಾಗಿದೆ.

## ನಾಗೇಂದ್ರ ಬೆನ್ನಲ್ಲೇ ದದ್ದಲ್‌ಗೂ ಅರೆಸ್ಟ್ ಸಂಕಷ್ಟ



**■ವಿಜಯಸಾಕ್ಷಿ ಸುದ್ದಿ, ಬೆಂಗಳೂರು**

ವಾಲ್ಮೀಕಿ ನಿಗಮ ಹಗರಣದ ತನಿಖೆ ಚುರುಕುಗೊಂಡಿದೆ. ಈಗಾಗಲೇ ಮಾಜಿ ಸಚಿವ ನಾಗೇಂದ್ರರನ್ನ ಇಡಿ ಅಧಿಕಾರಿಗಳು ಬಂಧಿಸಿ ವಿಚಾರಣೆ ಮಾಡ್ತಿದ್ದಾರೆ. ಈ ಮಧ್ಯೆ ಶಾಸಕ ಬಸನಗೌಡ ದದ್ದಲ್ ಬಂಧನ ಭೀತಿಯಿಂದ ನಾಪತ್ತೆಯಾಗಿದ್ದರೆ ಎಂಬ ಸುದ್ದಿ ಹಬ್ಬಿತ್ತು. ಆದರೆ ದದ್ದಲ್ ನಿನ್ನೆ ವಿಧಾನಸೌಧದಲ್ಲಿ ಪ್ರತ್ಯಕ್ಷರಾಗಿ ನಾನು ವಿಧಾನಸಭೆ ಕಲಾಪಕ್ಕೆ ಬಂದಿದ್ದೇನೆ, ನನಗೆ ಯಾವುದೇ ಇಡಿ ನೋಟೀಸ್ ಬಂದಿಲ್ಲಾ ಎಂದು ಹೇಳಿದ್ದರು.

ನಿನ್ನೆ ನನಗೆ ಯಾವ ನೋಟಿಸೂ ಬಂದಿಲ್ಲ ಎಂದಿದ್ದ ರಾಯಚೂರು ಒಐಂ ಬಸನಗೌಡ ದದ್ದಲ್‌ಗೆ ಸೆಷನ್ ನಡೆಯೋ ಹೊತ್ತಲ್ಲೇ ಇಡಿ ನೋಟಿಸ್ ಕೊಟ್ಟು ಶಾಕ್ ನೀಡಿದೆ. ವಾಲ್ಮೀಕಿ ಅಭಿವೃದ್ಧಿ ನಿಗಮದ 187 ಕೋಟಿ ಪ್ರಕರಣದಲ್ಲಿ ನೋಟಿಸ್ ನೀಡಿರುವ ಇಡಿ ಇಂದು ಬೆಳಗ್ಗೆ 11 ಗಂಟೆಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೋಟಿಸ್ ನೀಡಿದೆ.

ಸದ್ಯ ನನ್ನ ಮುಟ್ಟಿಲ್ಲ ಅಂತಿದ್ದ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಸನಗೌಡ ದದ್ದಲ್‌ಗೆ ಸೆಷೆನ್ಸ್ ನಡೆಯುವಾಗಲೇ ಇಡಿ ವಿಚಾರಣೆಯ ಬಿಸಿ ಮುಟ್ಟಿಸಿದೆ. ನೋಟಿಸ್ ನೀಡಿದ ಹಿನ್ನಲೆ ಬಂಧನದ ಭೀತಿಯಲ್ಲಿ ಇಡಿ ವಿಚಾರಣೆಗೆ ದದ್ದಲ್ ಹಾಜರಾಗಲು ಸಿದ್ದತೆ ನಡೆಸಿದ್ದಾರೆ.

**ಜುಲೈ 17ರಂದು ಆಚರಿಸುವ ಮೊಹರಂ ಹಬ್ಬದ ನಿಮಿತ್ತ ವಿಶೇಷ ಲೇಖನ**

# ಮೊಹರಂ ಹಬ್ಬ ಅರಿಯುವ ದಿನ



ಮೊಹರಂ ಇಸ್ಲಾಮಿನ ಹೊಸ ವರ್ಷದ ಹೊಸ ತಿಂಗಳು ಎಂಬ ನೆಲೆಯಲ್ಲಿ ಹಿಂದಿನಿಂದಲೂ ಗೌರವ ಪಡೆದಿದೆ. ಮೊಹರಂ ತಿಂಗಳ 10 ಎಂಬುದು ದೇವ ಪ್ರವಾದಿ ಹಝ್ರತ್ ಮೂಸಾ ಮತ್ತು ಬನೀ ಇಸ್ರಾಈಲ್ ಜನಾಂಗಕ್ಕೆ ಅಲ್ಲಾಹನು ರಾಜಾ ಫರೋವನ ದಬ್ಬಾಳಿಕೆಯಿಂದ ಮುಕ್ತಿ ದೊರಕಿಸಿದ ದಿನವಾಗಿತ್ತು. ಅದರಿಂದಾಗಿಯೇ ಯಹೂದಿಯರು ಅಂದು ಉಪವಾಸ ಆಚರಿಸುತ್ತಿದ್ದರು. ಪ್ರವಾದಿ ಮುಹಮ್ಮದ್ ಕೂಡಾ ಅಂದು ಉಪವಾಸ ಇರುತ್ತಿದ್ದರು. ಮಾತ್ರವಲ್ಲ ಮೊಹರಂ 10ರಂದು ಉಪವಾಸ ಇರುವಂತೆ ತಮ್ಮ ಜನರಿಗೂ ಆದೇಶಿಸಿದ್ದರು.

ಈಗ ಮುಸಲ್ಮಾನರು ಎರಡು ದಿನ ಉಪವಾಸ ಆಚರಿಸುತ್ತಾರೆ. ಮೊಹರಂ 10 ಕ್ರೂರಿ ದೊರೆ ಫರೋವನ ದಬ್ಬಾಳಿಕೆಯಿಂದ ಮುಕ್ತಿ ದೊರಕಿಸಿದ ಸಂತೋಷದಲ್ಲಿ ಕೃತಜ್ಞತೆಯ ರೂಪದಲ್ಲಿ ಉಪವಾಸದ ಮೂಲಕ ಆಚರಿಸಲ್ಪಡುತ್ತದೆ. ಅಲ್ಲದೆ ಪ್ರವಾದಿ ಮುಹಮ್ಮದರು ಮಕ್ಕಾ ಬಿಟ್ಟು ಮದೀನಾಕ್ಕೆ ಹಿಜ್ರತ್ ಹೋದ ದಿನದಿಂದ ಇಸ್ಲಾಮೀ ಸಂವತ್ಸರದ ಪ್ರಥಮ ತಿಂಗಳೆಂದು ಪರಿಗಣಿಸಲ್ಪಟ್ಟಿದೆ.

ಇಸ್ಲಾಮ ಎಂಬುದು ಒಂದು ಸಮಗ್ರ ಜೀವನ ವ್ಯವಸ್ಥೆ. ಮಾನವ ಜೀವನಕ್ಕೆ ಸಂಬಂಧಿಸಿದ ಸಾಮಾಜಿಕ, ಆರ್ಥಿಕ, ರಾಜಕೀಯ ಮುಂತಾದ ಸರ್ವ ರಂಗಗಳಿಗೂ ಅದು ಮಾರ್ಗದರ್ಶನ ಮಾಡುತ್ತದೆ. ಅದರ ಅಡಿಯಲ್ಲಿ ಒಂದು ಸುಂದರ, ಸುಭಿಕ್ಷ, ಮಾದರಿ ಸಮಾಜ ನಿರ್ಮಿಸಲು ನಿಯುಕ್ತರಾದ ಕೊನೆಯ ಪ್ರವಾದಿಗಳೇ ಪ್ರವಾದಿ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವಸಲ್ಲಂ. ಪ್ರವಾದಿ ಮುಹಮ್ಮದ್ ಅವರು ತಮ್ಮ ಸಮಾಜದಲ್ಲಿನ ಮಾನವ ರೂಪದ ದಾನವ ಸ್ವರೂಪಿಗಳನ್ನು ಆಮೂಲಾಗ್ರವಾಗಿ ಬದಲಾಯಿಸಿದವರಾಗಿದ್ದರು. ಅವರ ಬದುಕಿನ ಸಕಲ ರಂಗಗಳನ್ನು ದೇವಭಯದ ನೀರಿನಿಂದ ಸಂಪೂರ್ಣ ಶುದ್ಧಗೊಳಿಸಿದವರಾಗಿದ್ದರು. ಅವರೆಲ್ಲರ ವಿಶ್ವಾಸವನ್ನು, ಚಾರಿತ್ರ್ಯವನ್ನು, ಮನಸ್ಸನ್ನು ಸುಧಾರಿಸಿ ಅವರನ್ನು ಏಕದಾರದಲ್ಲಿ ಪೋಣಿಸಿದ ಅಮೂಲ್ಯ ಹಾರವನ್ನಾಗಿಸಿದರು.


ಪ್ರವಾದಿ ಅವರ ಕಾಲಾನಂತರ ಸಚ್ಚರಿತ ಖಲೀಫರು ದೈವಿಕ ಮಾರ್ಗದರ್ಶನದಂತೆ ಅದೇ ಇಸ್ಲಾಮಿ ಆಡಳಿತವನ್ನು ಸರಿಯಾಗಿ ಮುನ್ನೆಡೆಸಿಕೊಂಡು ಹೋದರು. ನಾಲ್ಕನೇ ಇಸ್ಲಾಮೀ ಆಡಳಿತಗಾರ (ಖಲೀಫ)ರಾದ ಹಝ್ರತ್ ಅಲೀ ಅವರ ನಿಧನದ ನಂತರ ಈ ವ್ಯವಸ್ಥೆ ಸ್ವಲ್ಪ ಸಡಿಲಾಯಿತು. ಆದರೂ ಕೆಲವೇ ದಿನಗಳಲ್ಲಿ ಚೇತರಿಸಿಕೊಂಡು ಖಲೀಫ ಹಝ್ರತ್ ಅಮೀರ್ ಮುಆವಿಯಾ ಅವರ ಬಳಿಕ ಖಲಾಪತ್ ವ್ಯವಸ್ಥೆಗೆ ಅಪಾಯ ಬಂದಿತು. ಖಿಲಾಫತ್ ವ್ಯವಸ್ಥೆ ಎಂಬುದು ಪ್ರಜಾಪ್ರಭುತ್ವ ಮಾದರಿಯಲ್ಲಿದ್ದು, ಪ್ರಜೆಗಳಿಂದಲೇ ಆಡಳಿತಗಾರರನ್ನು ಆರಿಸಲಾಗುತ್ತದೆ. ಪ್ರಜೇಗಳೇ ತಮ್ಮೊಳಗಿನಿಂದ ಅತ್ಯುತ್ತಮ ವ್ಯಕ್ತಿಯನ್ನು ಆರಿಸಿ ಖಲೀಫರನ್ನಾಗಿ ಮಾಡುತ್ತಾರೆ. ರಾಜಾಳಿತ, ವಂಶಾವಡಳಿತ, ಪಾಳೆಗಾರಿಕೆ, ಮತ್ತು ಸರ್ವಾಧಿಕಾರದಿಂದ ಸಂಪೂರ್ಣ ಮುಕ್ತವಾದ ವ್ಯವಸ್ಥೆಯದು.

ನಾಯಕ ಮುಆವಿಯ ಅವರ ನಂತರ ಪ್ರಜಾಪ್ರಭುತ್ವ ರೀತಿಗೆ ವಿರುದ್ಧವಾಗಿ ಅವರ ಪುತ್ರ ಯಝೀದ ಆಡಳಿತಗಾರನಾಗಲು ಹೊರಟಿದ್ದೇ ಈ ಎಲ್ಲ ಗಂಡಾಂತರಕ್ಕೆ ಕಾರಣವಾಗಿತ್ತು. ಯಝೀದ್ ಅವರ ಸ್ವನಿರ್ಣಯಕ್ಕೆ ಪ್ರವಾದಿವರ್ಯರ ಮೊಮ್ಮಗ ಹಝ್ರತ್ ಹುಸೈನ್ ಇಬ್ನ್ ಅಲಿ, ಹಿರಿಯ ಸಹಾಬಿಗಳಾದ ಅಬ್ದುಲ್ಲಾ ಬಿನ್ ಉಮರ್, ಅಬ್ದುಲ್ಲಾ ಬಿನ್ ಝುಬೈರ್, ಅಬ್ದುರ್ರಹ್ಮಾನ್ ಬಿನ್ ಅಬೂಬಕರ್ ಮುಂತಾದವರು ವಿರೋಧ ವ್ಯಕ್ತಪಡಿಸಿದರು. ಪ್ರವಾದಿ ಕಟ್ಟಿ ಬೆಳಿಸಿದ ಆಡಳಿತದ ರೀತಿಯಲ್ಲಿ ಪ್ರವಾದಿ ತೆ-ೂರಿದ ಹಾದಿಯಲ್ಲಿ ಖಿಲಾಫತ್ ವ್ಯವಸ್ಥೆ ಮುಂದುವರಿಯಬೇಕು ಎಂದು ಕೆಲವು ಹಿರಿಯ ಸಹಾಬಿಗಳ ಪ್ರಯತ್ನ, ಇದರ ನಡುವೆ ಕೂಫಾ ಪ್ರದೇಶದವರು ತನಗೆ ಬೆಂಬಲ ಕೊಡಲು ಸಿದ್ದರಿದ್ದಾರೆ ಎಂದು ತಿಳಿದ ಹಝ್ರತ್ ಹುಸೈನ್, ಆ ಕಡೆಗೆ ಪ್ರಯಾಣ ಬೆಳೆಸಿದರು.

ಆದರೆ ಗುರಿಯನ್ನು ಮುಟ್ಟುವ ಮೊದಲೇ ಯಝೀದ್ ಅವರ ದಂಡನಾಯಕ ಇಬ್ರೆ ಝಿಯಾದ್‌ನ ಸೇನೆಯು ಅವರನ್ನು ಸುತ್ತುವರಿಯಿತು. ಹುಸೈನ್ ಅವರ ಜತೆಗೆ ನಿಶ್ಯಸ್ತ್ರರಾದ ಕೆಲವೇ ಮಂದಿ, ದೂರ ಪ್ರಯಾಣದ ಆಯಾಸ, ಹಸಿವು, ಬಾರಿಕೆ ಬೇರೆ, ಯಝೀದ್‌ರೊಂದಿಗೆ ವಿಧೇಯತೆ-ಯ ಕರಾರು ಮಾಡುವಂತೆ ಇಬ್ನ್ ಝಿಯಾದನ ಒತ್ತಾಯ. ಆದರೆ ಹುಸೈನ್ ತಮ್ಮ ನಿಧಾರದಲ್ಲೇ ಅಚಲರಾದರು. ಕರ್ಬಲಾದ ರಣಬಿಸಿಲಿಗೆ ಇಬ್ನ್ ಝೀಯಾದ್ನ ಕೋಪ ನೆತ್ತಿಗೇರಿತು. ಆ ಸೇನೆಯ ಖಡ್ಗಗಳ ನೆತ್ತರ ದಾಹಕ್ಕೆ ಹುಸೈನ್ ಮತ್ತವರ ಕುಟುಂಬದ ರುಂಡಗಳು ಚೆಂಡಾಡಲ್ಪಟ್ಟವು. ಜನಹಿತ ಸಮಾಜ ಮಾನವ ಕುಲ ಕಲ್ಯಾಣ ವ್ಯವಸ್ಥೆಯೊಂದರ ರಕ್ಷಣೆಗಾಗಿ ಹೆಣಗಾಡುತ್ತ ವೀರ ಕಲಿಯೊಂದು ಈ ಲೋಕಕ್ಕೆ ವಿದಾಯ ಕೋರಿತು.

ಇತಿಹಾಸದಲ್ಲಿ ಐತಿಹಾಸಿಕ ಘಟನೆಗಳ ಸಾಕ್ಷಿಯಾಗಿ ನಿಲ್ಲವಂತ ಪ್ರಮುಖ ಘಟ್ಟಗಳಲ್ಲಿ ಪ್ರವಾದಿ ಆದಮರ ಪಶ್ಚಾತ್ತಾಪವನ್ನು ಅಲ್ಲಾಹನು ಸ್ವೀಕರಿಸಿದ್ದು, ಪ್ರವಾದಿ ನೂಹರ ಹಡಗು ಚಂಡಮಾರುತದಿಂದ ಪಾರಾಗಿ ಜೂದೀಬೆಟ್ಟದ ಮೇಲೆ ತಂಗಿದ್ದು, ಪ್ರವಾದಿ ಯೂನುಸ್ ಮೀನಿನ ಹೊಟ್ಟೆಯಿಂದ ಹೊರಬಂದದ್ದು. ಪ್ರವದಿ ಇಬ್ರಾಹೀಮ್ ನಮ್ರೂದನ ಬೆಂಕಿಯಿಂದ ಸುರಕ್ಷಿತವಗಿ ಪಾರಾಗಿ ಬಂದದ್ದು. ಪ್ರವಾದಿ ಮೂಸಾ ಅವರ ಬನೀ ಇಸ್ರಾಈಲ್ ಜನಾಂಗವು ಫಿರಔನ್‌ನಿಂದ ಮುಕ್ತಿ ಪಡೆದದ್ದು, ಹಝ್ರತ್ ಹುಸೈನರ ಹುತಾತ್ಮರಾದುದು.

ಇತಿಹಾದದಲ್ಲಿ ಮೊಹರಂ ತಿಂಗಳು ಹಲವಾರು ಘಟನೆಗಳಿಗೆ ಸಾಕ್ಷಿಯಾಗಿದೆ. ಮೊಹರಂ ಎಂಬುದು ಸಂತೋಷ ಸಂಭ್ರಮದಲ್ಲಿ ಮಿತಿಮೀರಿ ನಮ್ಮನ್ನೇ ನಾವು ಮರೆಯುವ ಮಾಸವಲ್ಲ. ಶೋಕಾಚರಣೆಯಲ್ಲಿ ತೊಡಗಿ ಅತಿರೇಕ ಎಸಗಿಕೊಳ್ಳುವ ತಿಂಗಳೂ ಅಲ್ಲ, ಸಮತೋಲನ ಮತ್ತು ಸಮಚಿತ್ತದೊಂದಿಗೆ ಅರಿತು ಮುನ್ನಡೆಯಲು ಮೊಹರಂ ಪ್ರೇರಕ ಶಕ್ತಿಯಾಗಿದೆ.



**– ಡಾ. ತಯಬಅಲಿ ಅ.ಹೊಂಬಳ. ಗದಗ.**

## ರಾಜ್ಯಸಭೆಯಲ್ಲಿ 101ಕ್ಕೆ ಕುಸಿದ ಎನ್‌ಡಿಎ ಸಂಖ್ಯೆ; ಮೇಲ್ಮನೆಯಲ್ಲಿ ಬಹುಮತ ಕಳೆದುಕೊಂಡ ಆಡಳಿತಪಕ್ಷ



**■ವಿಜಯಸಾಕ್ಷಿ ಸುದ್ದಿ, ನವದೆಹಲಿ**

ನಾಮನಿರ್ದೇಶಿತ ಸದಸ್ಯರಾದ ರಾಕೇಶ್ ಸಿನ್ಹಾ, ರಾಮ್ ಶಕಲ್, ಸೋನಾಲ್ ಮಾನ್ಸಿಂಗ್ ಮತ್ತು ಮಹೇಶ್ ಜೇಠ್ಮಲಾನಿ ತಮ್ಮ ಅವಧಿಯನ್ನು ಪೂರ್ಣಗೊಂಡ ನಂತರ, ರಾಜ್ಯಸಭೆಯಲ್ಲಿ ಬಿಜೆಪಿಯ ಬಲವು ಬಹುಮತಕ್ಕಿಂತ ಕಡಿಮೆಯಾಗಿದೆ.

ನಿವೃತ್ತರಾದ ಎಲ್ಲ ನಾಲ್ವರನ್ನು ಆಡಳಿತ ಪಕ್ಷದ ಸಲಹೆಯ ಮೇರೆಗೆ ಅಧ್ಯಕ್ಷೆ ದ್ರೌಪದಿ ಮುರ್ಮು ಅವರು ಸದಸ್ಯರಾಗಿ ಆಯ್ಕೆ ಮಾಡಿದ್ದರು; ನಂತರ ಔಪಚಾರಿಕವಾಗಿ ಪ್ರಧಾನಿ ನರೇಂದ್ರ ಮೋದಿಯವರ ಸರ್ಕಾರದೊಂದಿಗೆ ಅವರು ಮೈತ್ರಿ ಮಾಡಿಕೊಂಡರು.

ಅವರ ನಿವೃತ್ತಿಯು ಬಿಜೆಪಿಯ ಬಲವನ್ನು 86ಕ್ಕೆ ಮತ್ತು ಪಕ್ಷದ ನೇತೃತ್ವದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟದ ಬಲವನ್ನು 101ಕ್ಕೆ ಇಳಿಸುತ್ತದೆ. ಇದು 245 ಸದಸ್ಯರ ಸದನದಲ್ಲಿ ಪ್ರಸ್ತುತ ಬಹುಮತದ 113 ಕ್ಕಿಂತ ಕಡಿಮೆಯಾಗಿದೆ.

ರಾಜ್ಯಸಭೆಯ ಪ್ರಸ್ತುತ ಸಂಖ್ಯಾಬಲ 225

ಕಾಂಗ್ರೆಸ್ ನೇತೃತ್ವದ ಇಂಡಿಯಾ ಬಣವು 87, ಅದರಲ್ಲಿ ಕಾಂಗ್ರೆಸ್ 26, ಬಂಗಾಳದ ಆಡಳಿತಾರೂಢ ತೃಣಮೂಲ 13, ದೆಹಲಿ ಮತ್ತು ತಮಿಳುನಾಡಿನಲ್ಲಿ ಅಧಿಕಾರದಲ್ಲಿರುವ ಆಮ್ ಆದ್ಮಿ ಪಕ್ಷ ಮತ್ತು ಡಿಎಂಕೆ ತಲಾ 10 ಸದಸ್ಯರನ್ನು ಹೊಂದಿದೆ.

ತೆಲಂಗಾಣದ ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರ ಬಿಆರ್‌ಎಸ್‌ನಂತಹ ಬಿಜೆಪಿ ಅಥವಾ ಕಾಂಗ್ರೆಸ್‌ನೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದ ಪಕ್ಷಗಳು ನಾಮನಿರ್ದೇಶಿತ ಸಂಸದರು ಮತ್ತು ಸ್ವತಂತ್ರ ಸದಸ್ಯರುದ್ದಾರೆ.

ಸಂಖ್ಯೆ ಕಡಿಮೆಯಿಂದ ಬಿಜೆಪಿ ಮೇಲಿನ ಪರಿಣಾಮವೇನು?

ಇದರರ್ಥ ಸರ್ಕಾರವು ಈಗ ಎನ್‌ಡಿಎಯೇತರ ಪಕ್ಷಗಳ ಮೇಲೆ ಅವಲಂಬಿತವಾಗಿದೆ; ಮೇಲ್ಮನೆಯಲ್ಲಿ ಮಸೂದೆಗಳನ್ನು ಅಂಗೀಕರಿಸಲು ತಮಿಳುನಾಡಿನ ಮಾಜಿ ಮಿತ್ರಪಕ್ಷ ಎಐಎಡಿಎಂಕೆ ಮತ್ತು ಆಂಧ್ರ ಪ್ರದೇಶದ ಮಾಜಿ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಅವರ ವೈಎಸ್‌ಆರ್ ಕಾಂಗ್ರೆಸ್ ಪಕ್ಷಗಳ ಮೇಲೆ ಅವಲಂಬಿತವಾಗಬೇಕಿದೆ. ಸದ್ಯಕ್ಕೆ, ಎನ್‌ಡಿಎ ಪಕ್ಷಗಳ ಸಂಸದರ 15 ಮತಗಳನ್ನು ಬಿಜೆಪಿ ಪಡೆದುಕೊಳ್ಳಬಹುದು ಎಂದು ಭಾವಿಸಿದರೆ, ಮಸೂದೆಗಳನ್ನು ಜಾರಿಗೆ ತರಲು ಅದರ ಪರವಾಗಿ ಕನಿಷ್ಠ 13 ಹೆಚ್ಚುವರಿ ಮತಗಳು ಬೇಕಾಗುತ್ತವೆ.

ವೈಎಸ್‌ಆರ್‌ಸಿಪಿ (11) ಮತ್ತು ಎಐಎಡಿಎಂಕೆ (4) ಬಿಜೆಪಿಯ ಎರಡು ಸ್ಪಷ್ಟವಾದ 'ಮಿತ್ರಪಕ್ಷಗಳು', ಚುನಾವಣೆಗೆ ತಿಂಗಳುಗಳ ಮೊದಲು ಕಳೆದ ವರ್ಷ ಡಿಸೆಂಬರ್‌ನಲ್ಲಿ ವಿಭಜನೆಯಾದಾಗಿನಿಂದ ಅದರ ಸಂಬಂಧವು ಹದಗೆಟ್ಟಿದೆ.

ಜಗನ್ ಮೋಹನ್ ರೆಡ್ಡಿಯವರ ವೈಎಸ್‌ಆರ್‌ಸಿಪಿಯು ಈ ಹಿಂದೆ ಬಿಜೆಪಿಗೆ ವಿಷಯಾಧಾರಿತ ಬೆಂಬಲವನ್ನು ನೀಡಿದೆ. ಆದ್ದರಿಂದ, ಮೋದಿಯವರ ಪಕ್ಷಕ್ಕೆ ಕನಿಷ್ಠ 11 ಮತಗಳು ಖಚಿತವೆಂದು ತೋರುತ್ತದೆ. ಒಡಿಶಾದ ಮಾಜಿ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ಬಿಜೆಡಿ ಕೂಡ ಇದೇ ರೀತಿಯ ಬೆಂಬಲವನ್ನು ನೀಡಿತ್ತು. ಆದರೆ, ಮೇ-ಜೂನ್ ರಾಜ್ಯ ಚುನಾವಣೆಯಲ್ಲಿ ಬಿಜೆಪಿಯಿಂದ ಸೋಲಿಸಲ್ಪಟ್ಟಿದ್ದರಿಂದ ಬಿಜೆಪಿಯಿಂದ ದೂರ ಸರಿದಿದೆ.

ಎಐಎಡಿಎಂಕೆ ಬೆಂಬಲ ನೀಡಲು ಇಷ್ಟವಿಲ್ಲದಿದ್ದರೆ ಮತ್ತು ನವೀನ್ ಪಟ್ನಾಯಕ್ ಅವರ ಬಿಜೆಡಿ ತಿರುಗಿ ಬಿದ್ದ-ರೆ, ಬಿಜೆಪಿ ನಾಮನಿರ್ದೇಶಿತ ಸದಸ್ಯರ ಮತಗಳತ್ತ ತಿರುಗುತ್ತದೆ. ರಾಜ್ಯಸಭೆಯಲ್ಲಿ ಒಟ್ಟು 12 ನಾಮನಿರ್ದೇಶಿತ ಸದಸ್ಯರಿದ್ದಾರೆ. ಅವರು ಪಕ್ಷೇತರರಾದರೂಸರ್ಕಾರದಿಂದ ಆಯ್ಕೆಯಾಗಿರುವುದರಿಂದ, ಪ್ರಾಯೋಗಿಕವಾಗಿ ಅವರು ಆಡಳಿತ ಪಕ್ಷವನ್ನು ಬೆಂಬಲಿಸುತ್ತಾರೆ.

## ಗುಡ್ಡ ಕುಸಿದು ಒಂದೇ ಕುಟುಂಬದ 7 ಜನರು ಸಾವು



**■ವಿಜಯಸಾಕ್ಷಿ ಸುದ್ದಿ, ಕಾರವಾರ**

ಒಂದೇ ಕುಟುಂಬದ ಐವರು ಸೇರಿ ಏಳು ಮಂದಿ ಮೃತಪಟ್ಟಿರುವ ಬಗ್ಗೆ ವರದಿಯಾಗಿದ್ದು, ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಭಾರಿ ಮಳೆ ಮುಂದುವರೆದಿರುವ ಪರಿಣಾಮ ಅಂಕೋಲಾ ತಾಲೂಕಿನ ಶಿರೂರು ಬಳಿ ರಾಷ್ಟ್ರೀಯ ಹೆದ್ದಾರಿ 66 ರಲ್ಲಿ ಭಾರಿ ಗುಡ್ಡ ಕುಸಿದ ಪರಿಣಾಮ ಒಂದೇ ಕುಟುಂಬ ಐವರು ಸೇರಿದಂತೆ 7 ಮಂದಿ ಮಣ್ಣಿನಡಿಯಲ್ಲಿ ಸಿಲುಕಿ ಸಾವನ್ನಪ್ಪಿದ್ದಾರೆ.

ಮೃತಪಟ್ಟವರು ಲಕ್ಷ್ಮಣ ನಾಯ್ಕ (47), ಶಾಂತಿ ನಾಯ್ಕ (36), ರೋಶನ್ (11), ಅವಾಂತಿಕಾ (6), ಜಗನ್ನಾಥ (55) ಎಂದು ಗುರುತಿಸಲಾಗಿದೆ. ಇನ್ನೂ ಇಬ್ಬರ ಕುರಿತು ಯಾವುದೇ ಮಾಹಿತಿ ಲಭ್ಯವಾಗಿಲ್ಲ ಎಂದು ತಿಳಿದುಬಂದಿದೆ.

ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಶಿರೂರು ಬೊಮ್ಮಯ್ಯ ದೇವಸ್ಥಾನದ ಬಳಿ ಭಾರೀ ಗುಡ್ಡ ಕುಸಿತವಾಗಿದ್ದು, ಈ ಪರಿಣಾಮ ಹೆದ್ದಾರಿ ಬಳಿಯ ಸಣ್ಣಪುಟ್ಟ ಅಂಗಡಿಗಳಿಗೆ ಹಾನಿಯಾಗಿರುತ್ತದೆ.

## ಶೆಡ್‌ಗೆ ಬೆಂಕಿ ಹಚ್ಚಿದ ದುಷ್ಕರ್ಮಿಗಳು: ಇಬ್ಬರು ಸಜೀವ ದಹನ



**■ವಿಜಯಸಾಕ್ಷಿ ಸುದ್ದಿ, ಬಾಗಲಕೋಟೆ**

ಹೊಲದಲ್ಲಿದ್ದ ಶೆಡ್‌ಗೆ ಪೆಟ್ರೋಲ್ ಸುರಿದು ದುಷ್ಕರ್ಮಿಗಳು ಬೆಂಕಿ ಹಚ್ಚಿದ ಅಮಾನವೀಯ ಘಟನೆ ಜಿಲ್ಲೆಯ ಬೆಳಗಲಿಯಲ್ಲಿ ನಡೆದಿದೆ. ಘಟನೆಯಲ್ಲಿ ಶೆಡ್‌ನಲ್ಲಿದ್ದ ಇಬ್ಬರು ಸಜೀವ ದಹನವಾಗಿದ್ದಾರೆ. ಮೂವರು ಪಾರಾಗಿದ್ದಾರೆ.

ಮಹಾಲಿಂಗಪೂರ ಮೂಲದ ದಸ್ತಗೀರ ಸಾಬ ಮೌಲಾಸಾಬ್ ಪೆಂಡಾರಿ ಎಂಬುವವರ ಮನೆ ಮೇಲೆ ದುಷ್ಕರ್ಮಿಗಳು ಕೃತ್ಯವೆಸಗಿದ್ದಾರೆ. ಪೆಟ್ರೋಲ್ ಹಾಕಿ ಶೆಡ್‌ಗೆ ಬೆಂಕಿ ಹಚ್ಚಿದ್ದಾರೆ. ಶೆಡ್‌ನಲ್ಲಿ 5 ಜನ ನಿದ್ರೆಯಲ್ಲಿದ್ದರು. ಆದರೆ ಬೆಂಕಿಯ ಕೆನ್ನಾಲಿಗೆಗೆ ಇಬ್ಬರು ಮಹಿಳೆಯರು ಸಜೀವ ದಹನವಾಗಿದ್ದಾರೆ.

ಮಗಳು ಶಬಾನಾ ಪೆಂಡಾರಿ (26), ಜಯನಬಿ ಪೆಂಡಾರಿ ಪತ್ನಿ (50) ಮೃತ ದುರ್ದೈವಿಗಳು. ದಸ್ತಗೀರ್, ಸುಭಾನಾ, ಸಿದ್ದಿಕ್ ಎಂಬುವವರಿಗೆ ಗಾಯವಾಗಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

ದಸ್ತಗೀರ ಸಾಬ ಮೌಲಾಸಾಬ್ ಪೆಂಡಾರಿ ಕುಟುಂಬ ಎರಡೂವರೆ ಎಕರೆ ಹೊಲದಲ್ಲಿ ಉಳುಮೆ ಮಾಡಿಕೊಂಡಿದ್ದರು. ಆದರೆ ತಡರಾತ್ರಿ ದುಷ್ಕರ್ಮಿಗಳು ಶೆಡ್ ಮೇಲೆ ಪೆಟ್ರೋಲ್ ಸುರಿದು ಕೃತ್ಯವೆಸಗಿದ್ದಾರೆ. ತಕ್ಷಣ ಎಚ್ಚೆತ್ತುಕೊಂಡ ಮೂವರು ಮನೆಯಿಂದ ಓಡೋಡಿ ಹೊರಬಂದಿದ್ದಾರೆ. ಇನ್ನಿಬ್ಬರನ್ನ ಪಾರು ಮಾಡುವಷ್ಟರಲ್ಲಿ ಬೆಂಕಿಗೆ ಹೊತ್ತಿ ಉರಿದಿದ್ದಾರೆ.

ದುಷ್ಕರ್ಮಿಗಳು ಶೆಡ್ ಗೆ ಪೆಟ್ರೋಲ್ ಸುರಿಯಲು 2 ಊಕ ಸಾಮರ್ಥ್ಯದ ಮೋಟರ್ ಬಳಕೆ ಮಾಡಿದ್ದಾರೆ. 100 ಲೀಟರ್ ಸಾಮರ್ಥ್ಯದ ಸಿಂಟೆಕ್ಸ್‌ಗೆ ಪೆಟ್ರೋಲ್ ಹಾಕಿ ಸಿಂಪಡಿಸಿದ್ದಾರೆ. ಶೆಡ್‌ನ ಹೊರಗಡೆಯಿಂದ ಬೀಗ ಹಾಕಿ ಬೆಂಕಿ ಹಚ್ಚಿದ್ದಾರೆ. ಘಟನಾ ಸ್ಥಳಕ್ಕೆ ಬಾಗಲಕೋಟೆ ಜಿಲ್ಲೆಯ ಮುಧೋಳ ಪೋಲಿಸರು ಭೇಟಿ ನೀಡಿದ್ದು ಪರಿಶೀಲನೆ ನಡೆಸಿದ್ದಾರೆ. ಮುಧೋಳ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಸ್ಥಳಕ್ಕೆ ಎಸ್‌ಪಿ ಅಮರನಾಥ್ ರೆಡ್ಡಿ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಹುಬ್ಬಳ್ಳಿಯಲ್ಲಿ ಗ್ಯಾಸ್ ಕಟರ್ ಬಳಸಿ ಜ್ಯುವೆಲರಿ ಶಾಪ್‌ಗೆ ಕನ್ನ : 50 ಕೆಜಿ ಬೆಳ್ಳಿ, 800 ಗ್ರಾಂ ಚಿನ್ನಾಭರಣ ದರೋಡೆ..!




**■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ**

ಜ್ಯುವೆಲರಿ ಶಾಪ್‌ಗೆ ಕಳ್ಳರು ನುಗ್ಗಿ 50 ಕೆಜಿ ಬೆಳ್ಳಿ, 800 ಗ್ರಾಂ ಚಿನ್ನಾಭರಣ ದರೋಡೆ ಮಾಡಿರುವ ಘಟನೆ ಹುಬ್ಬಳ್ಳಿಯ ಕೇಶ್ವಾಪುರದ ಭುವನೇಶ್ವರಿ ಜ್ಯುವೆಲರಿ ವರ್ಕ್ಸ್‌ನಲ್ಲಿ ನಡೆದಿದೆ. ಜಗದೀಶ್ ದೈವಜ್ಞ ಎಂಬುವರಿಗೆ ಸೇರಿದ ಶಾಪ್‌ನಲ್ಲಿ ಕಳ್ಳತನ ನಡೆದಿದೆ.

ಖದೀಮರು ಬೆಳಗಿನ ಜಾವ 2 ಗಂಟೆಗೆ ಗ್ಯಾಸ್ ಕಟ್ಟರ್‌ನಿಂದ ಬೀಗ ಕಟ್ ಮಾಡಿ ಕೇಶ್ವಾಪುರದ ಭುವನೇಶ್ವರಿ ಜ್ಯುವೆಲರಿ ವರ್ಕ್ಸ್ ಒಳನುಗ್ಗಿದ್ದಾರೆ. ನಂತರ ಸಿಸಿ ಕ್ಯಾಮೆರಾಕ್ಕೆ ಸ್ಪ್ರೇ ಮಾಡಿ 50 ಕೆಜಿ ಬೆಳ್ಳಿ, 800 ಗ್ರಾಂ ಚಿನ್ನದ ಆಭರಣ ದರೋಡೆ ಮಾಡಿ ಎಸ್ಕೇಪ್ ಆಗಿದ್ದಾರೆ.

ಘಟನಾ ಸ್ಥಳಕ್ಕೆ ಪೊಲೀಸ್ ಕಮಿಷನರ್ ಶಶಿಕುಮಾರ್ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಒಂದು ಸಿಸಿಟಿವಿ ಕ್ಯಾಮೆರಾದಲ್ಲಿ ಇಬ್ಬರ ದೃಶ್ಯ ಸೆರೆಯಾಗಿದ್ದು, ಇಬ್ಬರು ವ್ಯಕ್ತಿಗಳಿಂದ ಕಳ್ಳತನ ನಡೆದಿರೋ ಸಾಧ್ಯತೆಯಿದೆ ಎಂದು ತಿಳಿದು ಬಂದಿದೆ. ಇನ್ನೂ ಕಳ್ಳರ ಪತ್ತೆಗೆ ಕಮಿಷನರ್ ವಿಶೇಷ ತಂಡ ರಚನೆ ಮಾಡಿದ್ದಾರೆ.

**ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ ಜಿ.ಹೆಚ್ ಮಾಹಿತಿ**

# ನ್ಯಾನೋ ಯೂರಿಯಾ ಬಳಕೆ ಬೆಳೆಗಳಿಗೆ ವರದಾನ

■ವಿಜಯಸಾಕ್ಷಿ ಸುದ್ದಿ, ಗದಗ

ಜಿಲ್ಲೆಯಲ್ಲಿ ಜುಲೈ ತಿಂಗಳಲ್ಲಿ ಸಾಕಷ್ಟು ಮಳೆಯಾಗಿರುವ ಕಾರಣದಿಂದ ಭೂಮಿಯಲ್ಲಿ ತೇವಾಂಶ ಹೆಚ್ಚಾಗಿದ್ದು, ಗೋವಿನಜೋಳ, ಸೂರ್ಯಕಾಂತಿ, ತೊಗರಿ, ಶೇಂಗಾ, ಹತ್ತಿ ಹಾಗೂ ಇತರೆ ಬೆಳೆಗಳಿಗೆ ರೈತರು ಯೂರಿಯಾ ಗೊಬ್ಬರವನ್ನು ಮೇಲು ಗೊಬ್ಬರವಾಗಿ ಬಳಸುತ್ತಿದ್ದಾರೆ. ಯೂರಿಯಾ ರಸಗೊಬ್ಬರಕ್ಕೆ ಪರ್ಯಾಯವಾಗಿ ಒಂದು ಎಕರೆ ಬೆಳೆಗೆ ಸುಮಾರು 500 ಮೀ.ಲೀ ನ್ಯಾನೋಯೂರಿಯಾ ಬಳಸಬೇಕು ಎಂದು ಜಂಟಿ ಕೃಷಿ ನಿರ್ದೇಶಕಿ ತಾರಾಮಣಿ ಜಿ.ಹೆಚ್ ತಿಳಿಸಿದ್ದಾರೆ.

ಬೆಳೆಗಳಿಗೆ ಹರಳು ರೂಪದ ಯೂರಿಯಾ ಬಳಸುವುದರಿಂದ ಬೇಕಾದ ಪೋಷಕಾಂಶಗಳು ಕೇವಲ ಶೇ.50ರಷ್ಟು ಮಾತ್ರ ದೊರೆಯುವ ಸಾಧ್ಯತೆ ಇರುತ್ತದೆ ಹಾಗೂ ಉಳಿದ ಪೋಷಕಾಂಶಗಳು ನೀರಿನ ಹರಿಯುವಿಕೆಯಿಂದ ಪೋಲಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಚಿಕ್ಕಗಾತ್ರದ ಕಣಗಳನ್ನು ಹೊಂದಿರುವ ನ್ಯಾನೋ ಯೂರಿಯಾ (20-50ಎನ್‌ಎಂ) ಬಳಸುವುದರಿಂದ ಬೆಳೆಗಳಿಂದ ಶೇ. 90ರಷ್ಟು ಪೋಷಕಾಂಶಗಳು ಉಪಯುಕ್ತವಾಗುತ್ತದೆ.



ನ್ಯಾನೋ ಯೂರಿಯಾದಲ್ಲಿ ಪ್ರಧಾನ ಪೋಷಕಾಂಶವಾದ ಸಾರಜನಕದ ಮೂಲ ದ್ರವರೂಪ ಗೊಬ್ಬರವಾಗಿದ್ದು, ಇದರ ಬಳಕೆಯಿಂದ ಬೆಳೆಗಳಲ್ಲಿ ಕಳೆ ನಿರ್ವಹಣೆಯಾಗುವುದರ ಜೊತೆಗೆ ಉತ್ತಮ ಬೆಳವಣಿಗೆಗೆ ಅನುಕೂಲ ಮಾಡುತ್ತದೆ. ನ್ಯಾನೋ ಯೂರಿಯಾದಲ್ಲಿನ ಸಾರಜನಕವು ಸಸ್ಯಗಳಲ್ಲಿ ಹೈಡ್ರೋಲಿಸಿಸ್ ಆಗಿ ಅಮೋನಿಕಲ್ ಮತ್ತು ನೈಟ್ರೇಟ್ ರೂಪದಲ್ಲಿ ಪರಿವರ್ತನೆಗೊಳ್ಳುತ್ತದೆ. ಬೆಳೆಗಳಿಗೆ ಬೇಕಾಗಿರುವ ಸಾರಜನಕವನ್ನು ಸರಿಯಾದ ಪ್ರಮಾಣದಲ್ಲಿ ಒದಗಿಸುತ್ತದೆ ಮತ್ತು ಇತರೆ ಪೋಷಕಾಂಶವನ್ನು ತೆಗೆದುಕೊಳ್ಳುವ ಸಂಯೋಜಿತ ಮಾರ್ಗವನ್ನು ಪ್ರಚೋದಿಸುತ್ತದೆ. ನ್ಯಾನೋ ಯೂರಿಯಾ ಬಳಕೆಯಿಂದ ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸಿ ವೆಚ್ಚವನ್ನು ಕಡಿಮೆ ಮಾಡುವ ಮೂಲಕ ರೈತರ ಆದಾಯವನ್ನು ಹೆಚ್ಚಿಸುತ್ತದೆ.

ಹರಳು ರೂಪದ ಯೂರಿಯಾ ತಯಾರಿಕೆಯಲ್ಲಿ ಫಿಲ್ಲರ್ ಪದಾರ್ಥಗಳ ಬಳಕೆಯಿಂದ ಮಣ್ಣಿನ ಪೋಷಕಾಂಶಗಳಿಗೆ ಹಾನಿಯಾಗಿ, ಜಲ ಮೂಲಗಳಿಗೆ ನೈಟ್ರೇಟ್ ಮಾಲಿನ್ಯ ಹರಡುತ್ತದೆ ಹಾಗೂ ಬ್ಲ್ಯೂ ಬೇಬಿ ಸಿಂಡ್ರೋಮ್ ನವಜಾತ ಶಿಶುಗಳಲ್ಲಿ ಕಂಡು ಬರುವ ಸಾಧ್ಯತೆಗಳಿರುತ್ತದೆ. ನ್ಯಾನೋ ಯೂರಿಯಾ ಬಳಕೆಯಿಂದ ಸಾಮಾನ್ಯವಾಗಿ ಹರಳು ರೂಪದ ಯೂರಿಯಾ ಬಳಕೆಯನ್ನು ಶೇ.50 ರಷ್ಟು ಕಡಿಮೆ ಮಾಡಬಹುದು. ರೈತರು ಇದನ್ನು ಸುಲಭವಾಗಿ ಶೇಖರಿಸಿ ಸಾಗಾಣಿಕೆ ಮಾಡಬಹುದು. ಇದು ಮಣ್ಣು, ಗಾಳಿ, ನೀರಿನ ಗುಣಮಟ್ಟ ಹಾಗೂ ಒಟ್ಟಾರೆ ಪರಿಸರ ಸಂರಕ್ಷಣೆಗೆ ಸಹಕಾರಿಯಾಗಿರುತ್ತದೆ. ಏಕದಳ, ದ್ವಿದಳ ಧಾನ್ಯಗಳು ಹಾಗೂ ಎಣ್ಣೆಕಾಳುಗಳಲ್ಲಿ ಮೊದಲನೇ ಸಿಂಪಡಣೆಯನ್ನು ಮೊಳಕೆಯೊಡೆದ 30-35 ದಿನಗಳ ನಂತರ ಹಾಗೂ ಎರಡನೇ ಸಿಂಪಡಣೆಯನ್ನು 50-60 ದಿನಗಳ ನಂತರ ಮಾಡಬಹುದು ಎಂದು ಅವರು ಮಾಹಿತಿ ನೀಡಿದ್ದಾರೆ.

ಒಂದು ಬಾಟಲ್ ನ್ಯಾನೋಯೂರಿಯಾ (500 ಮೀ.ಲೀ) ಒಂದು ಚೀಲ ಹರಳು ರೂಪದ ಯೂರಿಯಾಗೆ ಸಮವಾಗಿರುತ್ತದೆ. ಒಂದು ಬಾಟಲ್ ನ್ಯಾನೋ ಯೂರಿಯಾ ದರವು ರೂ.225 ಇದ್ದು, ಸಬ್ಸಿಡಿ ರಹಿತವಾಗಿರುತ್ತದೆ. ಹರಳು ರೂಪದ ನ್ಯಾನೋಯೂರಿಯಾದದರ ಸಬ್ಸಿಡಿ ಒಳಗೊಂಡಂತೆ ರೂ. 266 ಇದೆ. ಕೇಂದ್ರ ಸರ್ಕಾರಕ್ಕೆ ಆಮದು ರೂಪದಲ್ಲಿ ಆಮದು ಹೆಚ್ಚಿನ ಹೊರೆಯಾಗುತ್ತಿದೆ ಹಾಗೂ ಹರಳು ರೂಪದ ಯೂರಿಯಾಗೆ ಪರ್ಯಾಯವಾಗಿ ನ್ಯಾನೋ ಯೂರಿಯಾದ ಬಳಕೆಯು ಸಬ್ಸಿಡಿ ಹೊರೆಯನ್ನು ತಗ್ಗಿಸುವುದರ ಜೊತೆಗೆ ವಿದೇಶಿ ವಿನಿಮಯದ ಉಳಿಕೆಗೆ ಸಹ ಉತ್ತೇಜನ ನೀಡುತ್ತದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಗದಗ ಜಿಲ್ಲೆಯ ಇಫ್ಕೋ ಸಂಸ್ಥೆಯ ಪ್ರತಿನಿಧಿ ಗಣೇಶ ಮೊಬೈಲ್ ಸಂಖ್ಯೆ-9448090423 ಇವರನ್ನು ಸಂಪರ್ಕಿಸಬಹುದಾಗಿದೆ.

# ಮೊಹರಂ ಹಬ್ಬದ ನಿಮಿತ್ತ ಮದ್ಯ ಮಾರಾಟ ನಿಷೇಧ

■ವಿಜಯಸಾಕ್ಷಿ ಸುದ್ದಿ, ಧಾರವಾಡ


ಧಾರವಾಡ ಜಿಲ್ಲೆಯಲ್ಲಿ ಜುಲೈ 16ರಿಂದ 19ರವೆಗೆ ಮೊಹರಂ ಹಬ್ಬದ ಆಚರಣೆಯ ಸಮಯದಲ್ಲಿ ಕಾನೂನು ಮತ್ತು ಸುವ್ಯಸ್ಥೆ ಕಾಪಾಡುವ ಹಿತದೃಷ್ಟಿಯಿಂದ ಮದ್ಯಪಾನ, ಮದ್ಯಮಾರಾಟ ಮತ್ತು ಮದ್ಯ ಸಾಗಾಣಿಕೆಯನ್ನು ನಿಷೇಧಿಸಿ ಜಿಲ್ಲಾಧಿಕಾರಿ ದಿವ್ಯ ಪ್ರಭು ಅವರು ಆದೇಶ ಹೊರಡಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿರುವ ಅವರು, ಜುಲೈ 16ರ ಸಂಜೆ 6 ಗಂಟೆಯಿಂದ ಜುಲೈ 18ರ ಬೆಳಿಗ್ಗೆ 6 ಗಂಟೆಯವರೆಗೆ ಧಾರವಾಡ ಗ್ರಾಮೀಣ, ಹುಬ್ಬಳ್ಳಿ ಗ್ರಾಮೀಣ ತಾಲೂಕು (ಅರಳಿಕಟ್ಟೆ ಗ್ರಾಮ ಹೊರತುಪಡಿಸಿ), ಅಳ್ನಾವರ, ನವಲಗುಂದ, ಅಣ್ಣಿಗೇರಿ, ಕಲಘಟಗಿ ಮತ್ತು ಕುಂದಗೋಳ (ಯರಗುಪ್ಪಿ, ಯರಿನಾರಾಯಣಪೂರ, ಚಿಕ್ಕನರ್ತಿ, ಮುಳ್ಳೊಳ್ಳಿ, ಪಶುಪತಿಹಾಳ ಗ್ರಾಮಗಳನ್ನು ಹೊರತುಪಡಿಸಿ) ತಾಲೂಕು ಮತ್ತು ಜುಲೈ 17ರ ಸಂಜೆ 6 ಗಂಟೆಯಿಂದ ಜುಲೈ 19ರ ಬೆಳಿಗ್ಗೆ 6 ಗಂಟೆಯವರೆಗೆ ಹುಬ್ಬಳ್ಳಿ ಗ್ರಾಮೀಣ ತಾಲೂಕಿನ ಅರಳಿಕಟ್ಟಿ ಗ್ರಾಮ ಮತ್ತು ಕುಂದಗೋಳ ತಾಲೂಕಿನ ಯರಗುಪ್ಪಿ, ಯರಿನಾರಾಯಣಪೂರ, ಚಿಕ್ಕನರ್ತಿ, ಮುಳ್ಳೊಳ್ಳಿ, ಪಶುಪತಿಹಾಳ ಗ್ರಾಮಗಳಲ್ಲಿ ಮದ್ಯಪಾನ, ಮದ್ಯಮಾರಾಟ ಮತ್ತು ಮದ್ಯ ಸಾಗಾಣಿಕೆಯನ್ನು ನಿಷೇಧಿಸಲಾಗಿದೆ.

ಭಾರತಿಯ ತಯಾರಿಕೆ ಮದ್ಯದ ಅಂಗಡಿಗಳು, ಬಿಯರ್ ಬಾರಗಳು, ಕ್ಲಬ್‌ಗಳು, ಮದ್ಯದ ಡಿಪೋಗಳನ್ನು ನಿಷೇಧಾಜ್ಞೆ ಜಾರಿಯಲ್ಲಿರುವ ಅವಧಿಯಲ್ಲಿ ಮುಚ್ಚಬೇಕು. ಪರಿಸ್ಥಿತಿಗೆ ಅನುಗುಣವಾಗಿ ಸಾರ್ವಜನಿಕ ಶಾಂತತೆಯನ್ನು ಕಾಯ್ದುಕೊಂಡು ಬರುವ ಹಿತದೃಷ್ಟಿಯಿಂದ ವಲಯ ಅಬಕಾರಿ ಇನ್ಸ್‌ಪೆಕ್ಟರ್, ಉಪ ವಿಭಾಗ ಅಧಿಕ್ಷಕರು ಕರ್ನಾಟಕ ಅಬಕಾರಿ ಕಾಯ್ದೆ ಅನ್ವಯ ಅವಶ್ಯಕತೆ ಕಂಡುಬಂದಲ್ಲಿ ಶಾಂತಿ ಪಾಲನೆಗಾಗಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾಧಿಕಾರಿಗಳು ಆದೇಶಿಸಿದ್ದಾರೆ.

**ಶ್ರೀಸಾಯಿ ಮಂದಿರದಲ್ಲಿ ಸಾಯಿ ಸಚ್ಚರಿತ್ರೆ ಪ್ರವಚನ ಮಾಲಿಕೆ-4**

# ಬಾಬಾ ಭವಿಷ್ಯದ ಮುನ್ಸೂಚನೆ ನೀಡುತ್ತಿದ್ದರು




■ವಿಜಯಸಾಕ್ಷಿ ಸುದ್ದಿ, ಗದಗ

ಭವಿಷ್ಯತ್ಕಾಲದಲ್ಲಿ ಸಂಭವಿಸುವ ಘಟನೆಗಳ ಬಗ್ಗೆ ಸಾಯಿಬಾಬ ಅವರು ಭಕ್ತರಿಗೆ ಮುನ್ಸೂಚನೆಗಳನ್ನು ಸೂಚ್ಯವಾಗಿ ತಿಳಿಸುತ್ತಿದ್ದರು. ಭಕ್ತರ ಸಂಕಲ್ಪಗಳಿಗೆ ಬಾಬಾ ಅವರ ಅನುಗ್ರಹ ಇದ್ದರೆ ಮಾತ್ರ ಈಡೇರಲು ಸಾಧ್ಯ. ಇಲ್ಲವಾದರೆ ಸೇವೆ-ಪ್ರಯತ್ನ ಮುಂದುವರೆಸಿ ಎಂಬುದಾಗಿರುತ್ತದೆ ಎಂದು ಗದುಗಿನ ಧಾರ್ಮಿಕ ಚಿಂತಕ ಡಾ. ಎಸ್.ಬಿ. ಶೆಟ್ಟರ ಹೇಳಿದರು.

ಅವರು ಗದಗ ಹಾತಲಗೇರಿ ರಸ್ತೆಯ ಶ್ರೀ ಶಿರಡಿ ಸಾಯಿಬಾಬಾ ಮಂದಿರದಲ್ಲಿ ಶ್ರೀ ಶಿರಡಿ ಸಾಯಿಬಾಬಾ ಸತ್ಸಂಗ ಸಮಿತಿಯಿಂದ ಗುರುಪೂರ್ಣಿಮೆ ಅಂಗವಾಗಿ ಜುಲೈ 20ರವರೆಗೆ ನಡೆಯಲಿರುವ ಶ್ರೀ ಸಾಯಿ ಸಚ್ಚರಿತ್ರೆ ಪ್ರವಚನ ಮಾಲಿಕೆ-4ರಲ್ಲಿ ಮಾತನಾಡಿದರು.

ಬಾಬಾ ಅವರ ಕಣ್ಣು ತಪ್ಪಿಸಿ ನಾವು ಏನನ್ನೂ ಮಾಡಲಾಗದು. ಹಾಗೇನಾದರೂ ಮಾಡಿದ್ದೇ ಆದರೆ ಅದು ಅವರಿಗೆ ತಿಳಿದು ಅಪರೋಪಕ್ಷವಾಗಿ ತಪ್ಪು ಮಾಡಿದವರಿಗೆ ಜ್ಞಾನೋದಯ ಆಗುವಂತೆ ಮಾಡಿ ಅವರನ್ನು ಜಾಗ್ರತಗೊಳಿಸುತ್ತಿದ್ದರು ಎಂದರು.

ಸಾಯಿಬಾಬಾ ಧುನಿ ನಿರ್ಮಾಣಕ್ಕೆ ತಲಾ 25 ಸಾವಿರ ರೂ.ಗಳನ್ನು ದೇಣಿಗೆ ನೀಡಿದ ಪ್ರಶಾಂತ ನಾಯ್ಕರ್, 11 ಸಾವಿರ ರೂ.ಗಳನ್ನು ದೇಣಿಗೆ ನೀಡಿದ ಶಾಂತಾಬಾಯಿ ಕಾರಜೋಳ ಹಾಗೂ ಪುಷ್ಪಾವತಿ ಬಸವರಾಜ ಬಳ್ಳಾರಿ ಪರಿವಾರವನ್ನು ಮತ್ತು ಪ್ರವಚನದ ಪ್ರಸಾದ ಸೇವೆ ವಹಿಸಿಕೊಂಡಿದ್ದ ಪ್ರಶಾಂತ ನಾಯ್ಕರ್, ರುದ್ರಪ್ಪ ಚಂದ್ರಪ್ಪ ಅರಳಿ, ಚಂದ್ರುಗೌಡ ಸಂಗನಗೌಡ ಕಲ್ಲನಗೌಡ್ರ ಪರಿವಾರವನ್ನು ಸಮಾರಂಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಶ್ರೀ ಶಿರಡಿ ಸಾಯಿಬಾಬಾ ಸತ್ಸಂಗ ಸಮಿತಿಯ ಅಧ್ಯಕ್ಷ ಮಹೇಶ ತಲೇಗೌಡ್ರ ಸ್ವಾಗತಿಸಿದರು ಕಾರ್ಯದರ್ಶಿ ರವಿ ಚಿಂಚಲಿ ನಿರೂಪಿಸಿ ವಂದಿಸಿದರು. ಕಾರ್ಯಕ್ರಮದಲ್ಲಿ ಸಮಿತಿಯ ಪದಾಧಿಕಾರಿಗಳು, ಸದಸ್ಯರು, ಭಕ್ತಾಧಿಗಳು ಪಾಲ್ಗೊಂಡಿದ್ದರು.

ಜೀವನದಲ್ಲಿ ಬರುವ ಎಲ್ಲ ಪರೀಕ್ಷೆ, ಸವಾಲುಗಳನ್ನು ಸಾಧಿಸಲು ಸಾಯಿಬಾಬಾ ಅವರ ಅನುಗ್ರಹ ಇದ್ದರೆ ಮಾತ್ರ ಅವುಗಳು ಈಡೇರುವವು. ಅಚಲವಾಗಿ ನಂಬಿರುವ, ಶ್ರದ್ಧೆ-ಭಕ್ತಿಯಿಂದ ನಡೆದುಕೊಳ್ಳುವ ಪರಿಶುದ್ಧ ಕಾಯಕ ಮಾಡಿ ಜೀವನ ಮಾಡುವ ಭಕ್ತರನ್ನು ಬಾಬಾ ಅವರು ಸದಾಕಾಲ ಸಂರಕ್ಷಿಸುತ್ತಿದ್ದರು ಎಂಬುದನ್ನು ಅವರ ಚರಿತ್ರೆಯ ಪುಟಗಳಿಂದ ತಿಳಿಯಬಹುದಾಗಿದೆ ಎಂದು ಡಾ. ಎಸ್.ಬಿ. ಶೆಟ್ಟರ ಹೇಳಿದರು.

# ಗರ್ಭಿಣಿಯರ ಆರೋಗ್ಯದ ಜಾಗ್ರತೆಯಿರಲಿ

■ವಿಜಯಸಾಕ್ಷಿ ಸುದ್ದಿ, ಮುಳಗುಂದ

ಗರ್ಭಿಣಿಯರು ಹಾಗೂ ಬಾಣಂತಿಯರು ಆರೋಗ್ಯಕ್ಕೆ ಹೆಚ್ಚು ಒತ್ತು ನೀಡಬೇಕು. ಕಾಲ ಕಾಲಕ್ಕೆ ತಪಾಸಣೆ ಮಾಡಿಸಿಕೊಳ್ಳಬೇಕು. ಇದರಿಂದ ಹುಟ್ಟುವ ಮಗು ಆರೋಗ್ಯವಾಗಿರುತ್ತದೆ ಎಂದು ಕುರ್ತಕೋಟಿ ಪ್ರಾರ್ಥಮಿಕ ಆರೋಗ್ಯ ಕೇಂದ್ರದ ಆರೋಗ್ಯ ಸಂರಕ್ಷಣಾಧಿಕಾರಿ ಎಸ್.ಬಿ. ತಿಮ್ಮನಗೌಡರ ಹೇಳಿದರು.

ಅವರು ಪಟ್ಟಣ ಸಮೀಪದ ಕುರ್ತಕೋಟಿ ಗ್ರಾಮದ ಅಂಗವಾಡಿ ಕೇಂದ್ರ 294ರಲ್ಲಿ ಗರ್ಭಿಣಿಯರ ಆರೈಕೆ, ಬಾಣಂತಿಯರ ಆರೈಕೆ ಹಾಗೂ ಮಕ್ಕಳ ಲಸಿಕಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಈಗಾಗಲೇ ರಾಜಾದ್ಯಾಂತ ಡೆಂಘೀ ಜ್ವರ ಹೆಚ್ಚಾಗಿದ್ದು, ಮನೆಯಲ್ಲಿ ಕಾಯಿಸಿದ ಗರ್ಭಿಣಿಯರ ಆರೋಗ್ಯದ ಜಾಗ್ರತೆಯಿರಲಿ ನೀರನ್ನು ಬಳಕೆ ಮಾಡಬೇಕು. ಮನೆಯ ಸುತ್ತ ಮುತ್ತ ಸ್ವಚ್ಛತೆ ಕಾಯ್ದುಕೊಳ್ಳಬೇಕು, ಮನೆಯಲ್ಲಿ ಸಂಗ್ರಹಿಸುವ ನೀರನ್ನು ಎರಡು ಮೂರು ದಿನಕ್ಕೊಮ್ಮೆಯಾದರೂ ಸ್ವಚ್ಛಗೋಳಿಸಬೇಕು. ಬಾಣಂತಿಯರು, ಗರ್ಭಿಣಿಯರು ಪೌಷ್ಟಿಕಯುಕ್ತ ಆಹಾರ ಸೇವಿಸಬೇಕು ಎಂದರು.



ಗ್ರಾ.ಪಂ ಸದಸ್ಯ ಯಲ್ಲಪ್ಪ ಬೇವಿನಮರದ, ಆರೋಗ್ಯ ನಿರೀಕ್ಷಕ ಎಂ.ಆರ್. ಬಿಳೆಯಲಿ, ಎಸಿಡಿಪಿಓ ಸುರೇಖಾ ಮಲ್ಲಾಪೂರ, ರಾಜೇಶ್ವರಿ ಮೇಟಿ, ವಿನೋದ ಹೊಂಬಳ, ಅಂಗನವಾಡಿ ಕಾರ್ಯಕರ್ತೆಯರಾದ ರಾಧಾ ಬಂಡಿವಾಡ, ಸಾವಿತ್ರಿ ಹಸಬಿ, ಎ.ಎಂ. ಇನಾಮತಿ, ಸಾವಿತ್ರಿ ಸಬನಿಸ್ ಹಾಗೂ ಬಾಣಂತಿಯರು, ಗರ್ಭಿಣಿಯರು ಇದ್ದರು.

# ಶಾಲಾ ಸಂಸತ್ ರಚನೆಗಾಗಿ ಚುನಾವಣೆ



■ವಿಜಯಸಾಕ್ಷಿ ಸುದ್ದಿ, ಲಕ್ಷ್ಮೇಶ್ವರ

ಸಮೀಪದ ಆದರಹಳ್ಳಿ ಗ್ರಾಮದ ಸರಕಾರಿ ಮಾದರಿ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಯಲ್ಲಿ ಮಂಗಳವಾರ ಸಂಸತ್ತಿನ ರಚನೆ ಮತ್ತು ಮತದಾನ ಪರಿಕಲ್ಪನೆ ಮೂಡಿಸುವ ನಿಟ್ಟಿನಲ್ಲಿ ಶಾಲಾ ಸಂಸತ್ತು ರಚನೆಗಾಗಿ ಚುನಾವಣೆಯನ್ನು ನಡೆಸಲಾಯಿತು.

ಪ್ರಜಾಪ್ರಭುತ್ವದ ಮಾದರಿಯಲ್ಲಿ ನಡೆದ ಶಾಲಾ ಸಂಸತ್ತು ರಚನಾ ಪ್ರಕ್ರಿಯೆಯು ವಿದ್ಯಾರ್ಥಿಗಳಿಗೆ ಹೊಸ ಅನುಭವವನ್ನು ನೀಡಿತು. ಒಂದರಿಂದ ಹತ್ತನೇ ತರಗತಿವರೆಗೆ ತಮ್ಮ ಶಾಲಾ ಸಂಸತ್ತಿನ ನಾಯಕರನ್ನು ಇವಿಎಂ ಮಷೀನ್‌ನಲ್ಲಿ ಮತ ಚಲಾಯಿಸುವ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದರು. ಕೊನೆಯಲ್ಲಿ ಚುನಾವಣೆ ನಡೆದು ಅದರಲ್ಲಿ ಹೆಚ್ಚು ಮತ ಪಡೆದ ವಿದ್ಯಾರ್ಥಿಗಳು ಜಯಗಳಿಸಿದರು. ವಿದ್ಯಾರ್ಥಿಗಳು ಸಾಲಾಗಿ ನಿಂತು ಉತ್ಸಾಹದಿಂದ ಚುನಾವಣೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಈ ವೇಳೆ ಮಾಹಿತಿ ನೀಡಿದ ಮುಖ್ಯೋಪಾಧ್ಯಾಯ ಶ್ರೀಕಾಂತ ನಂದೆಣ್ಣವರ, ಶಾಲಾ ಸಂಸತ್ ಮಕ್ಕಳಿಂದ ಮಕ್ಕಳಿಗಾಗಿ ಮಕ್ಕಳಿಗೋಸ್ಕರ ನಡೆಯುವ ಪ್ರಜಾಪ್ರತಿನಿಧಿ ಆಯ್ಕೆ ವಿಧಾನವಾಗಿದೆ. ಮಕ್ಕಳ ಸಂಸತ್ತಿನಲ್ಲಿ ಮಕ್ಕಳೇ ಸಂಪೂರ್ಣ ಭಾಗಿದಾರರಾಗಿರುತ್ತಾರೆ. ತಮ್ಮ ಹಕ್ಕುಗಳನ್ನು ಪಡೆಯುವ ಮೂಲಕ ಕರ್ತವ್ಯ ನಿರ್ವಹಿಸುವ ಜವಾಬ್ದಾರಿ ಕಲಿಯುವುದಾಗಿದೆ ಎಂದು ಹೇಳಿದರು.

ಎಸ್‌ಡಿಎಂಸಿ ಅಧ್ಯಕ್ಷ ಮಹಾಂತಗೌಡ ಪಾಟೀಲ ಮತದಾನ ನಡೆಯುವಾಗ ಭೇಟಿ ನೀಡಿ ಶಾಲಾ ಸಂಸತ್ ಚುನಾವಣೆ ನೈಜ ಚುನಾವಣಾ ಕಾರ್ಯದಂತೆಯೇ ರೂಪಿಸಿದ್ದು ಮಕ್ಕಳಿಗೆ ಪ್ರಜಾಪ್ರಭುತ್ವ, ಚುನಾವಣಾ ಪ್ರಕ್ರಿಯೆಯ ಸಂಪೂರ್ಣ ಪರಿಚಯವಾಗುತ್ತದೆ ಎಂದು ಶಿಕ್ಷಕರ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದರು. ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಕರ ಹಾಜರಿದ್ದರು.

# ಭುವನ ಸುಂದರಿ ಡಾ.ಶೃತಿ ಹೆಗಡೆಗೆ ಸನ್ಮಾನ

■ವಿಜಯಸಾಕ್ಷಿ ಸುದ್ದಿ, ಹುಬ್ಬಳ್ಳಿ

ಅಮೇರಿಕಾದ ಫ್ಲೋರಿಡಾದಲ್ಲಿ ನಡೆದ ಮಿಸ್ ಯೂನಿವರ್ಸ್ ಪೆಟೈಟ್-2024 ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದು ಭಾರತ-ಕ್ಕೆ ಹೆಮ್ಮೆ ತಂದ ಡಾ.ಶೃತಿ ಹೆಗಡೆಯವರನ್ನು 'ಶರಣರ ಶಕ್ತಿ' ಚಿತ್ರತಂಡದ ವತಿಯಿಂದ ಸನ್ಮಾನಿಸಿ ಗೌರವಿಸಲಾಯಿತು.



ಅತಿಥಿಗಳಾಗಿ ಪಾಲಿಕೆ ಸದಸ್ಯ ರಾಜಣ್ಣ ಕೊರವಿ, ನಾಟ್ಯಾಂಜಲಿ ಕೇಂದ್ರದ ವಿದುಷಿ ಸಹನಾ ಭಟ್, ಚೇತನಾ ಪಬ್ಲಿಕ್ ಶಾಲೆಯ ಮುಖ್ಯಸ್ಥ ಮಹೇಶ ದ್ಯಾವಪ್ಪನವರ, ಮಂಜುನಾಥಗೌಡ ಪಾಟೀಲ, ಗಿರಿಜಾ ಸಂಗೊಳ್ಳಿ, ಡಾ.ರಮೇಶ, ಝುಡ್.ಎಂ. ಮುಲ್ಲಾ, ಅಕ್ಕಮ್ಮ ಹೆಗಡೆ, ಎಂ.ಎಂ. ಕರಿಗೌಡರ, ಡಾ. ವಿ.ಎಂ. ಭಟ್, ವೈಶಾಲಿ ಅಥಣಿ ಮೊದಲಾದವರು ಪಾಲ್ಗೊಂಡಿದ್ದರು. ವೇದಿಕೆಯಲ್ಲಿ ತಂದೆ ಡಾ.ಕೃಷ್ಣ ಎಂ.ಹೆಗಡೆ, ತಾಯಿ ಕಮಲಾ ಹೆಗಡೆ ಉಪಸ್ಥಿತರಿದ್ದರು.

ಎಂ.ಬಿ.ಬಿ.ಎಸ್ ಮುಗಿಸಿ, ಎಂ.ಡಿ ಮಾಡುತ್ತಿರುವ ಡಾ.ಶೃತಿ ಅವರನ್ನು ಈ ಸಂದರ್ಭದಲ್ಲಿ 'ಶರಣರ ಶಕ್ತಿ' ಚಲನಚಿತ್ರದಲ್ಲಿ ಬಸವಣ್ಣನವರ ಪಾತ್ರ ನಿರ್ವಹಿಸಿದ ಮಂಜುನಾಥ ಗೌಡ ಪಾಟೀಲ್, ನಗೇಮಾರಿ ತಂದೆ ಪಾತ್ರ ಮಾಡಿದ ವಿನೋದ ದಂಡಿನ್, ಚಲನಚಿತ್ರದ ಪಿಆರ್‌ಓ ಡಾ.ಪ್ರಭು ಗಂಜಿಹಾಳ, ಡಾ. ವೀರೇಶ ಹಂಡಿಗಿ ಮತ್ತು ಪ್ರಶಾಂತ ಚಿತ್ರ ತಂಡದ ಸದಸ್ಯರು ಸನ್ಮಾನಿಸಿ ಶುಭ ಕೋರಿದರು.

# ಅರ್ಜಿ ಅಹ್ವಾನ

■ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿಗೆ ಗದಗ ಜಿಲ್ಲೆಯಲ್ಲಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಅಧೀನದ ಮೊರಾರ್ಜಿ ದೇಸಾಯಿ/ ಕಿತ್ತೂರ ರಾಣಿ ಚೆನ್ನಮ್ಮ ವಸತಿ ಶಾಲೆಗಳಲ್ಲಿ ವಿಶೇಷ ವರ್ಗದ ಖಾಲಿ ಇರುವ 6ನೇ ತರಗತಿಯ ಸ್ಥಾನಗಳಿಗೆ ದಾಖಲಾತಿ ಸಂಬಂಧ ಆನ್‌ಲೈನ್ ಮೂಲಕ ನೇರ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿಶೇಷ ವರ್ಗಕ್ಕೆ ಸೇರಿದ ಮಕ್ಕಳ ಪೋಷಕರು https://cetonline.karnataka.gov.in/kreis24d/ SATS ಸಂಖ್ಯೆ ದಾಖಲಿಸಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದಿಂದ ಪಡೆದ ವಿಶೇಷ ವರ್ಗದ ಪ್ರಮಾಣ ಪತ್ರವನ್ನು ಅಪ್ಲೋಡ್ ಮಾಡಿದಾಗ ತಮ್ಮ ವಿಶೇಷ ವರ್ಗಕ್ಕೆ ಲಭ್ಯವಿರುವ ಸೀಟುಗಳ ವಿವರ ಲಭಿಸುತ್ತದೆ. ಒಂದು ವೇಳೆ ನಿಗದಿತ ವಿಶೇಷ ವರ್ಗಕ್ಕೆ ಸೀಟು ಲಭ್ಯವಿಲ್ಲದೇ ಇದ್ದಲ್ಲಿ ಸೀಟುಗಳ ಸಂಖ್ಯೆ 0 ಎಂದು ಪ್ರದರ್ಶಿತವಾಗುತ್ತದೆ. ಸೀಟು ಲಭ್ಯವಿದ್ದಲ್ಲಿ ಅಭ್ಯರ್ಥಿಯು ದಾಖಲಾತಿ ಆದೇಶ ಪತ್ರವನ್ನು ಮುದ್ರಿಸಿಕೊಂಡು ಸಂಬಂಧಪಟ್ಟ ವಸತಿ ಶಾಲೆಯಲ್ಲಿ ಪ್ರವೇಶ ಪಡೆಯಬಹುದಾಗಿದೆ.

ವರ್ಗವಾರು ಹಾಗೂ ವಸತಿ ಶಾಲಾವಾರು ಖಾಲಿಸ್ಥಾನಗಳ ಮಾಹಿತಿಯು https://kreis.karnataka.gov.in / ಲಭ್ಯವಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಮೀಪದ ಕ್ರೈಸ್ ವಸತಿ ಶಾಲೆಯ ಪ್ರಾಂಶುಪಾಲರನ್ನು ಭೇಟಿ ಮಾಡಬಹುದು ಅಥವಾ ಸಹಾಯವಾಣಿ ಸಂಖ್ಯೆ: 9482300400ಗೆ ಸಂಪರ್ಕಿಸಬಹುದಾಗಿದೆ ಎಂದು ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಾರ್ವಜನಿಕರ ಗಮನಕ್ಕೆ

■ವಿಜಯಸಾಕ್ಷಿ ಸುದ್ದಿ, ಗದಗ

2024-25ನೇ ಸಾಲಿನ (1-8-2024 ರಿಂದ 31-3-2025) ರವರೆಗೆ ರೋಣ ಪುರಸಭೆ ಆವರಣದಲ್ಲಿ ಸಂತೆ ಕರ ಲಿಲಾವನ್ನು ಜುಲೈ 24ರಂದು ಬೆಳಿಗ್ಗೆ 12 ಗಂಟೆಯಿಂದ ನಡೆಸಲಾಗುವುದು.

ಲಿಲಾವು ಕುರಿತು ಹೆಚ್ಚಿನ ಮಾಹಿತಿ ಬೇಕಾದಲ್ಲಿ ರೋಣ ಪುರಸಭೆ ಕಾರ್ಯಾಲಯವನ್ನು ಸಂಪರ್ಕಿಸಬಹುದಾಗಿದೆ.

# ಹೈನುಗಾರಿಕೆ ಪ್ರೋತ್ಸಾಹಿಸಲು ಸಹಾಯಧನ ಸೌಲಭ್ಯ

■ವಿಜಯಸಾಕ್ಷಿ ಸುದ್ದಿ, ಗದಗ

ಗದಗ ಜಿಲ್ಲೆಯಲ್ಲಿ 2024-25ನೇ ಸಾಲಿನ ಹೈನುಗಾರಿಕೆ ಪ್ರೋತ್ಸಾಹಿಸಲು ಹಸು/ಎಮ್ಮೆ ಖರೀದಿಗೆ ಪಡೆಯುವ ಸಾಲವನ್ನು ಸಕಾಲದಲ್ಲಿ ಮರುಪಾವತಿ ಮಾಡುವ ರೈತ ಮಹಿಳೆಯರಿಗೆ ರಾಜ್ಯ ಸರ್ಕಾರದಿಂದ ಶೇ.6 ರ ಬಡ್ಡಿಯಲ್ಲಿ ಸಹಾಯಧನ ನೀಡಲಾಗುವುದು.

ಪ್ರಸಕ್ತ ಸಾಲಿನಲ್ಲಿ ಹೈನುಗಾರಿಕೆಗಾಗಿ ವಿವಿಧ ಬ್ಯಾಂಕ್ ಗಳಲ್ಲಿ ಸಾಲ ಪಡೆಯುವ ಪ್ರತಿ ಫಲಾನುಭವಿಗಳಿಗೆ ಗರಿಷ್ಠ 65 ಸಾವಿರ ರೂ. ಸಾಲದ ಮೊತ್ತಕ್ಕೆ ಶೇ. 6 ಬಡ್ಡಿ ಸಹಾಯಧನ (3.625 ರೂ.) ನೀಡುವ ಯೋಜನೆ ಜಾರಿಗೊಳಿಸಲಾಗಿದೆ. ಈ ಕಾರ್ಯಕ್ರಮವನ್ನು ವಾಣಿಜ್ಯ ಬ್ಯಾಂಕ್‌ಗಳ ಸಮನ್ವಯದೊಂದಿಗೆ ಅನುಷ್ಠಾನಗೊಳಿಸಲು ಸೂಚಿಸಲಾಗಿದೆ.

ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಹೈನುಗಾರಿಕೆಗೆ ರಾಷ್ಟ್ರೀಕೃತ, ಗ್ರಾಮೀಣ ಹಾಗೂ ಸಹಕಾರ ಬ್ಯಾಂಕ್‌ಗಳಲ್ಲಿ ಸಾಲ ಪಡೆದಿರುವ ರೈತ ಮಹಿಳೆಯರು ಸದುಪಯೋಗ ಪಡೆಯಬಹುದು.

ಹೆಚ್ಚಿನ ಮಾಹಿತಿಗೆ ತಾಲೂಕುಗಳ ಮುಖ್ಯ ಪಶು ವೈದ್ಯಾಧಿಕಾರಿಗಳು (ಆಡಳಿತ) ಪಶು ಆಸ್ಪತ್ರೆ, ಗದಗ, ಮುಂಡರಗಿ, ನರಗುಂದ, ರೋಣ, ಗಜೇಂದ್ರಗಡ, ಶಿರಹಟ್ಟಿ, ಲಕ್ಷ್ಮೇಶ್ವರ ಕಚೇರಿಗಳಿಗೆ ಸಂಪರ್ಕಿಸಬಹುದಾಗಿದೆ ಎಂದು ಉಪನಿರ್ದೇಶಕರು ಪಶುಪಾಲನಾ ಮತ್ತು ಪಶು ವೈದ್ಯಕಿಯ ಸೇವಾ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಚಿಕ್ಕಹಂದಿಗೋಳದಲ್ಲಿ ಸುಗಮ ಸಂಗೀತ-ಜನಪದೋತ್ಸವ**

# ಸಂಗೀತಕ್ಕೆ ರೋಗ ನಿಧಾನಗೊಳಿಸುವ ಶಕ್ತಿ ಇದೆ

■ವಿಜಯಸಾಕ್ಷಿ ಸುದ್ದಿ, ಗದಗ

ಸಂಗೀತಕ್ಕೆ ರೋಗಗಳನ್ನು ನಿಧಾನಗೊಳಿಸುವ ಶಕ್ತಿ ಇದೆ. ಸಂಗೀತದಿಂದ ಮಾನಸಿಕ ಒತ್ತಡ ಶಮನಗೊಂಡು ಪ್ರಸನ್ನತೆ ಮೂಡುವದು ಎಂದು ನಿವೃತ್ತ ಅಧಿಕಾರಿ ಎಂ.ಜಿ. ಸಂತೋಜಿ ಅಭಿಪ್ರಾಯಪಟ್ಟರು.

ಅವರು ತಾಲೂಕಿನ ಚಿಕ್ಕಹಂದಿಗೋಳ ಗ್ರಾಮದ ಹಿರೇಮಠದಲ್ಲಿ ಕರ್ನಾಟಕ ಕೀರ್ತನ ಕಲಾ ವೇದಿಕೆ ಗದಗ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಸುಗಮ ಸಂಗೀತ ಹಾಗೂ ಜನಪದೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿದರು.



ಸಂಗೀತ ಕ್ಷೇತ್ರಕ್ಕೆ ಗದುಗಿನ ಕೊಡುಗೆ ಅನುಪಮವಾದದ್ದು. ವೀರೇಶ್ವರ ಪುಣ್ಯಾಶ್ರಮದ ಮೂಲಕ ಪಂ.ಪಂಚಾಕ್ಷರ ಗವಾಯಿಗಳು, ಪಂ.ಪುಟ್ಟರಾಜ ಗವಾಯಿಗಳು ಸಾವಿರ ಸಾವಿರ ಕಲಾವಿದರಿಗೆ ಶಾಸ್ತ್ರೋಕ್ತ ಸಂಗೀತ ನೀಡಿದ್ದರ ಪರಿಣಾಮವಾಗಿ ಅವರಿಂದ ರಾಜ್ಯ, ದೇಶ-ವಿದೇಶಗಳಲ್ಲಿ ಖ್ಯಾತ ಕಲಾವಿದರಾಗಿದ್ದಾರೆ.

ಅಂಧ, ವಿಕಲಚೇತನರು ಸಂಗೀತದ ಮೂಲಕ ತಮ್ಮ ಭವ್ಯ ಭವಿಷ್ಯವನ್ನು ರೂಪಿಸಿಕೊಂಡಿದ್ದಾರೆ. ಸಂಗೀತವೇ ಅವರಿಗೆ ಉಸಿರು-ಆಸ್ತಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಬಸಯ್ಯ ಹಿರೇಮಠ ಸಂದರ್ಭೋಚಿತವಾಗಿ ಮಾತನಾಡಿದರು. ವೇದಿಕೆಯ ಮೇಲೆ ಯಮನಪ್ಪ ತಳವಾರ, ಎಂ.ಎನ್. ಕುಬಸದ, ವ್ಹಿ.ಡಿ. ಶಿವಸಿಂಪಿಗೇರ, ರಾಜಶೇಖರ ಕುನ್ನಿ, ವಿರೂಪಾಕ್ಷಗೌಡ ಗೌಡರ, ನಿಜಲಿಂಗಪ್ಪ ಕಿತ್ತೂರ, ಶರಣಯ್ಯಸ್ವಾಮಿ ವೀರಕ್ತಮಠ ಉಪಸ್ಥಿತರಿದ್ದರು.

ಸಂಗೀತ ಕಲಾವಿದೆ, ಗಾಯಕಿ ಅನ್ನಪೂರ್ಣ ಹುಬ್ಬಳ್ಳಿ ಅವರಿಂದ ಸುಗಮ ಸಂಗೀತ ಹಾಗೂ ಜನಪದೋತ್ಸವ ಜರುಗಿತು. ವಿನಾಯಕ ಹಿರೇಮಠ ಹಾಗೂ ವೀರೇಶ ಹಿರೇಮಠ ಅವರು ಸಾಥ್ ನೀಡಿದರು. ವೀರನಗೌಡ ಗೌಡರ ನಿರೂಪಿಸಿ ವಂದಿಸಿದರು.

ಕರ್ನಾಟಕ ಕೀರ್ತನ ಕಲಾ ವೇದಿಕೆಯ ಅಧ್ಯಕ್ಷ ಸಿದ್ದೇಶ್ವರ ಶಾಸ್ತ್ರೀ ತೆಲ್ಲೂರ ಮಾತನಾಡಿ, ಡಾ. ಪಂ.ಪುಟ್ಟರಾಜ ಗವಾಯಿಗಳವರ ಹಾಗೂ ಪೂಜ್ಯ ಡಾ. ಕಲ್ಲಯ್ಯಜ್ಜನವರ ಆಶೀರ್ವಾದದೊಂದಿಗೆ ಕರ್ನಾಟಕ ಕೀರ್ತನ ಕಲಾ ವೇದಿಕೆ ಸಂಗೀತ, ಸಾಹಿತ್ಯ, ಕೀರ್ತನ, ಜನಪದ ಕಾರ್ಯಕ್ರಮಗಳೊಂದಿಗೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ನೀಡುತ್ತಿದೆ. ಹಲವಾರು ಹಿರಿ-ಕಿರಿಯ ಕಲಾವಿದರಿಗೆ ಕರ್ನಾಟಕ ಕೀರ್ತನ ಕಲಾ ವೇದಿಕೆಯು ವೇದಿಕೆ ಒದಗಿಸಿದೆ ಎಂದರು.

